# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:12.03.2026

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ :08192-208029 ಇ-ಮೇಲ್:registrar@davangereuniversity.ac.in


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/1108/2025-26/ 5537 ದಿನಾಂಕ:23.03.2026

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:12.03.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ - III ರ ಪ್ರಕರಣ 16 (i) ರ ರೀತ್ಯ ದಿನಾಂಕ:12.03.2026 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಪ್ರಾಧಿಕಾರ/ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಹಣಕಾಸು/ಪರೀಕ್ಷಾಂಗ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:12.03.2026 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಪ್ರೊ. ಲೋಕೇಶ್ ಎಂ.ಯು., ಡೀನರು, ಕಲಾ ನಿಕಾಯ, ದಾವಿವಿ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಬಿ. ಎನ್. ಉಮೇಶ್, ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಶ್ರೀ ಭರಮಗೌಡ ಪಾಟೀಲ., ಪ್ರಾಚಾರ್ಯರು : ಸದಸ್ಯರು
6. ಶ್ರೀ ತಿಪ್ಪೇಶ್ ಜಿ.ಆರ್., ಪ್ರಾಚಾರ್ಯರು : ಸದಸ್ಯರು
7. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
8. ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
9. ಡಾ. ಜಿ.ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
10. ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಪ್ರೊ. ಮಮತ ಜಿ.ಪಿ., ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ : ಸದಸ್ಯರು
13. ಪ್ರೊ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
14. ಶ್ರೀ ಎಸ್.ಬಿ. ಗಂಟಿ, ಕೆ.ಎ.ಎಸ್.(ಸೂಪರ್ ಟೈಂ ಸ್ಕೇಲ್) ಕುಲಸಚಿವರು (ಆಡಳಿತ) : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 14 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಸಿಂಡಿಕೇಟಿಗೆ ನಾಮನಿರ್ದೇಶನಗೊಂಡಿರುವ – **ಪ್ರೊ. ಮಮತ ಜಿ.ಪಿ., ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರನ್ನು ಸಭೆಗೆ ಸ್ವಾಗತಿಸಿದರು** ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ಮಾನ್ಯ ಕುಲಪತಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(03/26) |

## –:ಟಿಪ್ಪಣಿ:–

**ವಿಷಯ:** **ದಿನಾಂಕ:30.12.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ದೃಢೀಕರಣ ಕುರಿತು.**

*****

ದಿನಾಂಕ:30.12.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಸಿದ್ಧಪಡಿಸಲಾಗಿದ್ದು, ದಿನಾಂಕ:12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕ:30.12.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಕುರಿತು ಚರ್ಚಿಸಿ ಅನುಪಾಲನಾ ವರದಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.01(b)/(03/26) |

## –:ಟಿಪ್ಪಣಿ:–

**ವಿಷಯ: ದಿನಾಂಕ:29.01.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ ಕುರಿತು.**

*****

ದಿನಾಂಕ:29.01.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:10.02.2026 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಇದುವರೆಗೂ ಸದರಿ ನಡಾವಳಿಗಳ ಕುರಿತು ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಂಡಿರುವುದಿಲ್ಲ. ಆದ್ದರಿಂದ, ಸದರಿ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ29.01.2025 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು — ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.01(c)/(03/26) |

## –ಃಟಿಪ್ಪಣಿಃ–

**ವಿಷಯಃ ದಿನಾಂಕ:29.01.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಪಾಲನಾ ವರದಿಯ (Action Taken Report) ದೃಢೀಕರಣ ಕುರಿತು.**

*****

ದಿನಾಂಕ:29.01.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಅಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಸಿದ್ಧಪಡಿಸಲಾಗಿದ್ದು, ದಿನಾಂಕ:12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕಃ29.01.2026 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಪಾಲನಾ ವರದಿಯನ್ನು (Action Taken Report) ಕುರಿತು ಚರ್ಚಿಸಿ ಅನುಪಾಲನಾ ವರದಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.01(d)/(03/26) |

**–:ಟಿಪ್ಪಣಿ:–**

**ವಿಷಯ: ಸಂಶೋಧನಾ ಕೇಂದ್ರದ ಮಾನ್ಯತೆಯ ಪರಿನಿಯಮಗಳಿಗೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರಸಂಖ್ಯೆ:ಇಡಿ 218 ಯುಎನ್‌ಇ 2023 ದಿನಾಂಕ:21.01.2026
2. ಸರ್ಕಾರದ ಪತ್ರಸಂಖ್ಯೆ:ಇಡಿ 218 ಯುಎನ್‌ಇ 2023 ದಿನಾಂಕ:05.02.2026
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.02.2026

*****

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳನ್ನು ಸಂಶೋಧನಾ ಕೇಂದ್ರಗಳೆಂದು ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದ ಪರಿನಿಯಮಗಳನ್ನು ನಿಯಮಾನುಸಾರ ರಚಿಸಿ ತುರ್ತಾಗಿ ಸರ್ಕಾರಕ್ಕೆ ಸಲ್ಲಿಸುವಂತೆ ಉಲ್ಲೇಖ (1) & (2) ರ ಸರ್ಕಾರದ ಪತ್ರದಲ್ಲಿ ತಿಳಿಸಲಾಗಿತ್ತು.

ಆದ್ದರಿಂದ, ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಕಾಲೇಜುಗಳನ್ನು ಸಂಶೋಧನಾ ಕೇಂದ್ರವೆಂದು ಮಾನ್ಯತೆ ನೀಡುವ ಪರಿನಿಯಮಗಳನ್ನು – ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ – 2000, ಸೆಕ್ಷನ್ 66 ರನ್ವಯ ರಚಿಸಿ ಹಾಗೂ ಉಲ್ಲೇಖ (3) ಮಾನ್ಯ ಕುಲಪತಿಗಳ ಆದೇಶಾನುಸಾರ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆಯನ್ನು ಕಾಯ್ದಿರಿಸಿ, ಪರಿನಿಯಮಗಳನ್ನು ದಿನಾಂಕ:21.02.2026 ರಂದು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಕುರಿತು ದಿನಾಂಕ:12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಸ್ನಾತಕೋತ್ತರ ವಿಭಾಗಗಳು ಇರುವ ಕಾಲೇಜುಗಳನ್ನು ಸಂಶೋಧನಾ ಕೇಂದ್ರಗಳೆಂದು ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿದ ಪರಿನಿಯಮಗಳನ್ನು ಸರ್ಕಾರದ ಮುಖಾಂತರ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.01(e)/(03/26) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಮರು ನಾಮಕರಣ ಮಾಡುವ ಕುರಿತು.**

ಉಲ್ಲೇಖ:
1. ಸನ್ಮಾನ್ಯ ಮುಖ್ಯ ಮಂತ್ರಿಯವರ ಟಿಪ್ಪಣಿ ಸಂಖ್ಯೆ: ಮುಮಂಃಆಶಾಃ 0988415/2025 ದಿನಾಂಕಃ 22.09.25.
2. ಸರ್ಕಾರದ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ:ಇಡಿ/ಯುಎಸ್ಇ/2025/ ದಿನಾಂಕಃ 14.10.2025

*********

ಸನ್ಮಾನ್ಯ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ಸಿದ್ಧರಾಮಯ್ಯನವರು ಉಲ್ಲೇಖ (1)ರ ಟಿಪ್ಪಣಿಯಲ್ಲಿ ನೀಡಿರುವ ಸೂಚನೆಯ ಮೇರೆಗೆ – ಸರ್ಕಾರದ ಉಲ್ಲೇಖ (2)ರ ಪತ್ರದಲ್ಲಿ ಕಾರ್ಯದರ್ಶಿಯವರು, ಉನ್ನತ ಶಿಕ್ಷಣ ಇಲಾಖೆ ಬೆಂಗಳೂರು – ಇವರು – ರಾಜ್ಯದ ಕೆಲವು ವಿಶ್ವವಿದ್ಯಾನಿಲಯಗಳಿಗೆ ಸರ್ವಶ್ರೇಷ್ಠ ಕವಿಗಳ, ದಾರ್ಶನಿಕರ ರಾಜ ಮಹಾರಾಜರ, ವಿದ್ವಾಂಸರುಗಳ ಹಾಗೂ ಹೆಸರಾಂತ ವಿಶ್ವಮಟ್ಟದ ರಾಜಕಾರಣಿಗಳ ಹೆಸರುಗಳನ್ನು ಈಗಾಗಲೇ ನಾಮಕರಣ ಮಾಡಿರುವಂತೆಯೆ – ರಾಜ್ಯದ ಸರ್ವತೋಮುಖ ಅಧಿವೃದ್ಧಿಗೆ ಕೊಡುಗೆ ನೀಡಿರುವವರ ಹೆಸರುಗಳನ್ನು ರಾಜ್ಯ ಸರ್ಕಾರದ ಇನ್ನಿತರೆ ವಿಶ್ವವಿದ್ಯಾನಿಲಯಗಳಿಗೆ ಮರುನಾಮಕರಣ ಮಾಡುವ ಅಗತ್ಯವಿದೆಯೆಂದು ಪ್ರಸ್ತಾಪಿಸಿರುತ್ತಾರೆ. ತತ್ಸಂಬಂಧದ ಸರ್ಕಾರದ ಉಲ್ಲೇಖ (2)ರ ಪತ್ರವನ್ನು ಈ ಟಿಪ್ಪಣಿಗೆ ಲಗತ್ತಿಸಿ, ಸಭೆಯ ಗಮನಕ್ಕೆ ತರಲಾಗಿದೆ. ಈ ಸಂಬಂಧ ದಿನಾಂಕಃ 07.11.2025 ರಂದು ಸರ್ಕಾರಕ್ಕೆ ಪತ್ರ ಸಲ್ಲಿಸಿ, ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳಿಗೆ ವಿಷಯ ಮಂಡಿಸಿ ವಿಶ್ವವಿದ್ಯಾನಿಲಯದ ನಿರ್ಣಯವನ್ನು ಸರ್ಕಾರದ ಅವಗಾಹನೆಗೆ ಸಲ್ಲಿಸಲಾಗುವುದೆಂದು ತಿಳಿಸಲಾಗಿದೆ.

ಈ ಹಿನ್ನಲೆಯಲ್ಲಿ, ಮಧ್ಯ ಕರ್ನಾಟಕ ಭಾಗದ ಹೆಮ್ಮೆಯ ಪುತ್ರ ಹಾಗೂ ಶಿವೈಕ್ಯರಾದ ಡಾ. ಶಾಮನೂರು ಶಿವಶಂಕರಪ್ಪನವರು ಸರ್ವಶ್ರೇಷ್ಠ ದಾನಿಯಾಗಿ ಆರೋಗ್ಯ, ಶಿಕ್ಷಣ ಮತ್ತು ಸಮಾಜದ ವಿವಿಧ ಕ್ಷೇತ್ರಗಳ ಸರ್ವತೋಮುಖ ಅಭಿವೃದ್ಧಿಗೆ ಗಣನೀಯ ಸೇವೆ ಸಲ್ಲಿಸಿದವರಲ್ಲಿ ಅವಿಸ್ಮರಣೀಯ ವ್ಯಕ್ತಿಯಾಗಿ ಜನಮಾನಸದಲ್ಲಿ ನೆಲೆಯೂರಿದ್ದಾರೆ. ಪೂರ್ವ ಪ್ರಾಥಮಿಕ ಶಿಕ್ಷಣ ಕ್ಷೇತ್ರದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ಮೆಡಿಕಲ್, ಇಂಜಿನಿಯರಿಂಗ್, ಕಾನೂನು, ಶಿಕ್ಷಣ ಹಾಗೂ ಸಾಮಾನ್ಯ ಪದವಿಗಳಲ್ಲಿ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಹ ಅತ್ಯುನ್ನತ ಶಿಕ್ಷಣ ಸಂಸ್ಥೆಗಳನ್ನು ಬಾಪೂಜಿ ಎಜುಕೇಷನ್ ಅಸೋಸಿಯೇಷನ್ ಸಂಸ್ಥೆಯಡಿ ದಾವಣಗೆರೆ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ಥಾಪಿಸಿ ದಾವಣಗೆರೆ ನಗರವನ್ನು **"ವಿದ್ಯಾಕಾಶಿ"** ಎಂಬ ಹೆಸರಿನಿಂದ ಗುರುತಿಸುವಂತೆ ಮಾಡಿ ಎಲ್ಲಾ ಸಮುದಾಯದ ವಿದ್ಯಾರ್ಥಿಗಳು ವಿವಿಧ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆಗೈಯ್ಯಲು ಡಾ. ಶಾಮನೂರು ಶಿವಶಂಕರಪ್ಪನವರು ದಾರಿ–ದೀಪವಾಗಿದ್ದಾರೆಂಬುದು ಎಲ್ಲರಿಗೂ ವೇದ್ಯ.

ಸುಮಾರು ನಾಲ್ಕು ದಶಕಗಳ ಹಿಂದೆ ಮಧ್ಯ ಕರ್ನಾಟಕ ಭಾಗದ ಪ್ರತಿಭಾವಂತ ವಿದ್ಯಾರ್ಥಿಗಳು ಸ್ನಾತಕೋತ್ತರ ಶಿಕ್ಷಣದ ಅಧ್ಯಯನಕ್ಕಾಗಿ ಮೈಸೂರಿಗೆ ಧಾವಿಸುವಂತಹ ಪರಿಸ್ಥಿತಿ ಇದ್ದಾಗ, ಡಾ. ಶಾಮನೂರು ಶಿವಶಂಕರಪ್ಪನವರು ಸರ್ಕಾರದ ಹಂತದಲ್ಲಿ ಅವಿರತ ಹೋರಾಟ ಮಾಡಿ, ಮೈಸೂರು ವಿಶ್ವವಿದ್ಯಾನಿಲಯದ ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಪ್ರಾರಂಭಿಸುವ ಬಗ್ಗೆ ಸಶಕ್ತರಾದರು. ಆ ಸಂದರ್ಭದಲ್ಲಿ ಬಾಪೂಜಿ ವಿದ್ಯಾಸಂಸ್ಥೆಯ ಕೆಲವು ಕಾಲೇಜುಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳನ್ನು ತೆರೆಯಲು ಅವಕಾಶ ನೀಡಿದ್ದರ ಫಲವಾಗಿ ಈ ಭಾಗದ ವಿದ್ಯಾರ್ಥಿಗಳು ಸ್ನಾತಕೋತ್ತರ ಶಿಕ್ಷಣದ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಲು ಅನುಕೂಲವಾಯಿತು.

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

ಕುವೆಂಪು ವಿಶ್ವವಿದ್ಯಾನಿಲಯವು 1987ರಲ್ಲಿ ಪ್ರಾರಂಭವಾದ ನಂತರ ದಾವಣಗೆರೆ ನಗರದಲ್ಲಿ ಪೂರ್ಣ ಪ್ರಮಾಣದ ಸ್ನಾತಕೋತ್ತರ ಕೇಂದ್ರವನ್ನು ಪ್ರಸ್ತುತದ ಆವರಣದಲ್ಲಿ ಸ್ಥಾಪಿಸಲು ನಗರದ ಪ್ರಮುಖ ದಾನಿಗಳೊಂದಿಗೆ ಕೈಜೋಡಿಸಿ ಅಂದಾಜು 75 ಎಕರೆ ಸ್ಥಳದಲ್ಲಿ ಹೊಸ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಗೆ ಶ್ರಮವಹಿಸಿದುದಲ್ಲದೆ ಬಾಪೂಜಿ ಎಜುಕೇಷನ್ ಅಸೋಸಿಯೇಷನ್ ಸಂಸ್ಥೆಯ ಹೆಸರಲ್ಲಿ ಶೈಕ್ಷಣಿಕ ಮತ್ತು ಆಡಳಿತ ಕಟ್ಟಡವನ್ನು 1998ರಲ್ಲಿ ನಿರ್ಮಿಸುವ ಮೂಲಕ ಅದರ ಶ್ರೇಯೋಭಿವೃದ್ಧಿಗೆ ಕಾರಣರಾದರು.

ತದನಂತರದ ದಶಕದಲ್ಲಿ – ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಚುನಾಯಿತ ಪ್ರತಿನಿಧಿಗಳು, ವಿವಿಧ ಸಮುದಾಯಗಳ ಮಠಾಧೀಶರ ಮತ್ತು ಸಾರ್ವಜನಿಕ ವಿದ್ಯಾರ್ಥಿ ಸಂಘಟನೆಗಳ ಮೂಲಕ ಮುಂಚೂಣಿ ಕಾರ್ಯಪ್ರವರ್ತಕರಾಗಿ ರಾಜ್ಯ ಸರ್ಕಾರದ ಗಮನ ಸೆಳೆದು ದಾವಣಗೆರೆ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಯಶಸ್ವಿಯಾಗಿ ಕಾರ್ಯನಿರ್ವಹಿಸಿರುವುದು ಜನಸಾಮಾನ್ಯರಿಗೂ ತಿಳಿದಿರುವ ವಿಷಯ. ಒಟ್ಟಿನಲ್ಲಿ ಡಾ. ಶಾಮನೂರು ಶಿವಶಂಕರಪ್ಪನವರು – ಆರೋಗ್ಯ, ಶಿಕ್ಷಣ, ಸರ್ವ ಸಮಾಜದ ಹಾಗೂ ದೀನ ದಲಿತರ ಸರ್ವತೋಮುಖ ಅಭ್ಯುದಯಕ್ಕಾಗಿ ಶ್ರಮಿಸಿದ್ದಾರೆ ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಸರ್ಕಾರದ ಉಲ್ಲೇಖ (2)ರ ಪತ್ರವನ್ನು ಹಾಗೂ ಮಾನ್ಯ ಮುಖ್ಯ ಮಂತ್ರಿಗಳ ಅಭಿಲಾಷೆಯನ್ನು ಸಭೆಯ ಗಮನಕ್ಕೆ ತರುತ್ತಾ, ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಡಾ. ಶಾಮನೂರು ಶಿವಶಂಕರಪ್ಪ – ಇವರ ಹೆಸರನ್ನು ಮರುನಾಮಕರಣ ಮಾಡುವ ಬಗ್ಗೆ. ದಿ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಸಲ್ಲಿಸಿದೆ.

ವಿವರಣೆ:

- ಶ್ರೀ ಪ್ರಶಾಂತ್ ಆರ್.ಟಿ., ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಡಾ. ಶಾಮನೂರು ಶಿವಶಂಕರಪ್ಪ ಇವರ ಹೆಸರನ್ನು ವಿಶ್ವವಿದ್ಯಾನಿಲಯಕ್ಕೆ ಇಡುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಡಾ. ಶಾಮನೂರು ಶಿವಶಂಕರಪ್ಪ – ಇವರ ಹೆಸರನ್ನು ಮರುನಾಮಕರಣ ಮಾಡಲು, ಸದರಿಯವರು ಶೈಕ್ಷಣಿಕ ರಂಗಕ್ಕೆ ಹಾಗೂ ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.01(f)/(03/26) |

# –಼ ಟಿಪ್ಪಣಿ ಃ–

ವಿಷಯಃ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದ್ದ ಪರಿನಿಯಮಗಳಿಗೆ – ಪರಿಶೀಲಿಸಿ ನಂತರ – ಕೆಲವು ತಿದ್ದುಪಡಿಗಳನ್ನು ಮಾಡಿ ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವ ಕುರಿತು.

ಉಲ್ಲೇಖಃ
1. ಸರ್ಕಾರದ ಪತ್ರಸಂಖ್ಯೆ:ಇಡಿ 22 ಯುಎನ್ಇ 2025 ದಿ:31.12.2025
2. ಸರ್ಕಾರದ ಪತ್ರಸಂಖ್ಯೆ:ಇಡಿ 203 ಯುಎನ್ಇ 2025 ದಿ:04.12.2025
3. ಸರ್ಕಾರದ ಪತ್ರಸಂಖ್ಯೆ:ಇಡಿ 202 ಯುಎನ್ಇ 2025 ದಿ:04.12.2025
4. ಸರ್ಕಾರದ ಪತ್ರಸಂಖ್ಯೆ:ಇಡಿ 204 ಯುಎನ್ಇ 2025 ದಿ:04.12.2025
5. ಸರ್ಕಾರದ ಪತ್ರಸಂಖ್ಯೆ:ಇಡಿ 19 ಯುಎನ್ಇ 2025 ದಿ:07.01.2026
6. ಸರ್ಕಾರದ ಪತ್ರಸಂಖ್ಯೆ:ಇಡಿ 21 ಯುಎನ್ಇ 2025 ದಿ.23.01.2025
7. ಸರ್ಕಾರದ ಪತ್ರಸಂಖ್ಯೆ:ಇಡಿ 20 ಯುಎನ್ಇ 2025 ದಿ:23.01.2025
8. ಸರ್ಕಾರದ ಪತ್ರಸಂಖ್ಯೆ:ಇಡಿ 23 ಯುಎನ್ಇ 2025 ದಿ:23.07.2025

*********

ವಿಶ್ವವಿದ್ಯಾನಿಲಯದ ದೈನಂದಿನ ಆಡಳಿತ ವ್ಯವಸ್ಥೆಗೆ ಅವಶ್ಯವಿರುವ ಈ ಕೆಳಕಂಡ ಪರಿನಿಯಮಗಳನ್ನು ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲಾಗಿತ್ತು. ಸದರಿ ಪರಿನಿಯಮಗಳನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ, ಕೆಲವು ಚಿಕ್ಕ ಚಿಕ್ಕ ತಿದ್ದುಪಡಿಗಳನ್ನು ಮಾಡಿದ ನಂತರ ಪುನಃ ಯಥಾವತ್ತಾಗಿ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಪುನಃ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ ಕ್ರಮ ವಹಿಸಬೇಕಾಗಿದೆ. ಸರ್ಕಾರದ ಪರಿಶೀಲನೆಗೆ ಸಲ್ಲಿಸಲಾಗಿದ್ದ ಪರಿನಿಯಮಗಳ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ಕ್ರ. ಸಂ | ಕರಡು ಪರಿನಿಯಮಗಳ ವಿವರ | ಈ ಹಿಂದೆ ಅನುಮೋದನೆ ಪಡೆಯಲಾದ ಪ್ರಾಧಿಕಾರಗಳು ಮತ್ತು ದಿನಾಂಕ | | |
|---|---|---|---|---|
| | | ಸಿಂಡಿಕೇಟ್ | ವಿದ್ಯಾವಿಷಯಕ ಪರಿಷತ್ತು | ಹಣಕಾಸು ಸಮಿತಿ |
| 1. | STATUTES GOVERNING THE RULES FOR TRANSACTIONS OF BUSINESS AT THE MEETINGS OF SYNDICATE OF DAVANGERE UNIVERSITY | 18.03.2025 | 01.04.2025 | 25.03.2025 |
| 2. | DRAFT STATUTES GOVERNING THE “CONFERMENT OF HONORIS CAUSA (HONORARY DEGREES) DEGREES AND ACADEMIC DEGREES IN DAVANGERE UNIVERSITY | 18.03.2025 | 01.04.2025 | 25.03.2025 |
| 3. | DRAFT STATUTES GOVERNING THE INSTITUTION OF DR. BABU JAGJIVAN RAM CENTRE FOR RESEARCH AND EXTENSION ACTIVITIES IN DAVANGERE UNIVERSITY | 21.01.2025 | 04.01.2025 | 27.01.2025 |
| 4. | DRAFT STATUTES GOVERNING THE “WITHDRAWAL OF ACADEMIC DEGREES/DIPLOMAS/ HONORIS CAUSA DEGREES” CONFERRED BY DAVANGERE UNIVERSITY | 21.01.2025 | 04.01.2025 | 27.01.2025 |
| 5. | STATUTES GOVERNING THE POWERS, FUNCTIONS AND TRANSACTIONS OF BUSINESS AT THE MEETINGS OF THE FACULTIES OF DAVANGERE UNIVERSITY. | 18.03.2025 | 01.04.2025 | 25.03.2025 |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

| | | | | |
|---|---|---|---|---|
| 6. | STATUTES GOVERNING THE RULES FOR TRANSACTIONS OF BUSINESS AT THE MEETINGS OF THE FINANCE COMMITTEE OF DAVANGERE UNIVERSITY | 18.03.2025 | 01.04.2025 | 25.03.2025 |
| 7. | STATUTES GOVERNING THE CONSTITUTION, POWERS, FUNCTIONS AND TRANSACTION OF BUSINESS AT THE MEETINGS OF THE BOARD OF STUDIES OF DAVANGERE UNIVERSITY | 18.03.2025 | 01.04.2025 | 25.03.2025 |
| 8. | STATUTES GOVERNING THE RULES FOR TRANSACTIONS OF BUSINESS AT THE MEETINGS OF THE ACADEMIC COUNCIL OF DAVANGERE UNIVERSITY. | 18.03.2025 | 01.04.2025 | 25.03.2025 |

ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಲ್ಲಿ ಮೇಲಿನ ಪರಿನಿಯಮಗಳನ್ನು ಪರಿಶೀಲಿಸಿ, ಸೂಚಿಸಿರುವ ಕೆಲವು ತಿದ್ದುಪಡಿಗಳನ್ನು ಸಂಬಂಧಪಟ್ಟ ಪರಿನಿಯಮಗಳಲ್ಲಿ ಅಳವಡಿಸಲಾಗಿದ್ದು, ಪುನಃ ಸರ್ಕಾರದ ಅನುಮೋದನೆಗೆ ಸಲ್ಲಿಸಲು ದಿನಾಂಕಃ 12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಪುನಃ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಮೇಲ್ಕಂಡ 08 ಪರಿನಿಯಮಗಳನ್ನು ಪರಿಶೀಲಿಸಿ, ಸೂಚಿಸಿರುವ ಕೆಲವು ತಿದ್ದುಪಡಿಗಳನ್ನು ಸರಿಪಡಿಸಿ ಪುನಃ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 7 | |
|---|---|
| ವಿಷಯ ಸಂಖ್ಯೆ: | ಸಿಂ.01(g)/(03/26) |

# –ಃ ಟಿಪ್ಪಣಿ ಃ–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ಆಯ್ಕೆಗಾಗಿ ಶೋಧನಾ ಸಮಿತಿಯನ್ನು ರಚಿಸಲು ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡುವ ಕುರಿತು.**

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಇಡಿ 18 ಯುಎನ್‌ಇ 2026 ದಿನಾಂಕ:28.01.2026

*********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ನೇಮಕಾತಿಗೆ ಶೋಧನಾ ಸಮಿತಿಯನ್ನು ಸರ್ಕಾರವು ರಚಿಸಬೇಕಾಗಿರುತ್ತದೆ. ಸದರಿ ಸಮಿತಿಗೆ ನಮ್ಮ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ ಒಬ್ಬ ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಬೇಕಾಗಿರುತ್ತದೆ. ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

## :: ನಿರ್ಣಯ ::

ಮಾನ್ಯ ಕರ್ನಾಟಕ ಸರ್ಕಾರವು ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳ ನೇಮಕಾತಿಗೆ ರಚಿಸುವ ಶೋಧನಾ ಸಮಿತಿಗೆ – ವಿಶ್ವವಿದ್ಯಾನಿಲಯದ ಸಿಂಡಿಕೇಟ್ ವತಿಯಿಂದ – **ಪ್ರೊ. ಕೆ. ಸಿದ್ದಪ್ಪ, ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು** – ಇವರನ್ನು ನಾಮನಿರ್ದೇಶನಗೊಳಿಸಲು ಸಭೆಯು ನಿರ್ಣಯಿಸಿತು. ನಂತರ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 8 | |
|---|---|
| ವಿಷಯ ಸಂಖ್ಯೆ: | ಸಿಂ.01(h)/(03/26) |

# –ಃ ಟಿಪ್ಪಣಿ ಃ–

**ವಿಷಯಃ** **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ ಪರಿನಿಯಮಗಳನ್ನು ಅನುಮೋದಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪ್ರಾರಂಭಿಸುವ ಕುರಿತಾದ ಪರಿನಿಯಮಗಳನ್ನು ರಚಿಸಿಕೊಂಡು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾದ ಸಿಂಡಿಕೇಟ್ ಸಭೆ (18.03.2025) ವಿದ್ಯಾವಿಷಯಕ ಪರಿಷತ್ ಸಭೆ (01.04.2025) ಹಾಗೂ ಹಣಕಾಸು ಸಮಿತಿ (25.03.2025) ಸಭೆಯ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿತ್ತು.

ಸರ್ಕಾರವು ಸದರಿ ಪರಿನಿಯಮಗಳಿಗೆ ಸಂಬಂಧಿಸಿದಂತೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಪುನಃ ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದು ಪ್ರಸ್ತುತ ಕುಲಪತಿಗಳು ಹಾಗೂ ಕುಲಸಚಿವರ ಸಹಿಯೊಂದಿಗೆ ಪುನಃ ಸಲ್ಲಿಸುವಂತೆ ತಿಳಿಸಿರುತ್ತಾರೆ.

ಆದ್ದರಿಂದ, ಸದರಿ ಪರಿನಿಯಮಗಳಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಲಾಗಿದ್ದು, ಪ್ರಾಧಿಕಾರಗಳ ಅನುಮೋದನೆ ಪಡೆದು ಪುನಃ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ತತ್ಸಂಬಂದ, ಸದರಿ ಪರಿನಿಯಮಗಳನ್ನು ದಿನಾಂಕಃ12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ Innovation and Start-up Incubation Centre (DUISIC) ಪರಿನಿಯಮಗಳನ್ನು ವಿವಿಧ ಪ್ರಾಧಿಕಾರಗಳ ಅನುಮೋದನೆ ಪಡೆದುಕೊಂಡು ಪುನಃ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಮೂಲಕ ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 9 | |
| --- | --- |
| ವಿಷಯ ಸಂಖ್ಯೆ: | ಸಿಂ.02(a)/(03/26) |

## –ಃಟಿಪ್ಪಣಿಃ–

ವಿಷಯಃ ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುವ ಬಗ್ಗೆ.

ಉಲ್ಲೇಖಃ 1. ಪ್ರೊ. ಗೊವಿಂದಪ್ಪ ಎಂ, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ /ಆತ/2025-26/288, ದಿನಾಂಕಃ 13.02.2026

2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ 24.02.2026

*****

ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ದಿನಾಂಕಃ26.03.2026 ರಿಂದ 28.03.2026 ರವರೆಗೆ The Second Vietnam International Symposium on Medicinal Plants and Natural Products (MPNP 2026), Quy Nhon Nam, Gia Lai, Vietnam ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮೌಖಿಕ ಪ್ರಸ್ತುತಿ (Oral Presentation) ನೀಡುವ ಸಲುವಾಗಿ ದಿನಾಂಕಃ 23.03.2026 ರಿಂದ 30.03.2026ರವರೆಗೆ (ಪ್ರಯಾಣ ದಿನಗಳು ಸೇರಿ) ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರ ಮುಖಾಂತರ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ12.03.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

### :: ನಿರ್ಣಯ ::

ಪ್ರೊ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ23.03.2026 ರಿಂದ 30.03.2026 ರವರೆಗೆ – The Second Vietnam International Symposium on Medicinal Plants and Natural Products (MPNP 2026), Quy Nhon Nam, Gia Lai, Vietnam ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮೌಖಿಕ ಪ್ರಸ್ತುತಿ (Oral Presentation) ನೀಡಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                                        ಕುಲಪತಿಗಳು

| ಮಾ.ಸ.ನಿ. ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(02/26) |

# –:ಟಿಪ್ಪಣಿ:–

ವಿಷಯಃ **ಪ್ರೊ. ಶರತ್ ಆರ್, ಪ್ರಾಧ್ಯಾಪಕರು – ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖಃ 1. ಪ್ರೊ. ಶರತ್ ಆರ್, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ/ಆತ/2025-26/163, ದಿನಾಂಕಃ 13.02.2026

2. ಮಾನ್ಯ ಕುಲಪತಿಗಳ ಆದೇಶ ದಿನಾಂಕಃ 24.02.2026

*****

ಪ್ರೊ. ಶರತ್ ಆರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ದಿನಾಂಕಃ26.03.2026 ರಿಂದ 28.03.2026 ರವರೆಗೆ The Second Vietnam International Symposium on Medicinal Plants and Natural Products (MPNP 2026), Quy Nhon Nam, Gia Lai, Vietnam ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮೌಖಿಕ ಪ್ರಸ್ತುತಿ (Oral Presentation) ನೀಡುವ ಸಲುವಾಗಿ ದಿನಾಂಕಃ23.03.2026 ರಿಂದ 30.03.2026ರವರೆಗೆ (ಪ್ರಯಾಣ ದಿನಗಳು ಸೇರಿ) ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಉಲ್ಲೇಖಿತ ಪತ್ರದಲ್ಲಿ ಅಧ್ಯಕ್ಷರ ಮುಖಾಂತರ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕಃ12.03.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಸಲ್ಲಿಸಿದೆ.

## :: ನಿರ್ಣಯ ::

ಪ್ರೊ. ಶರತ್ ಆರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ23.03.2026 ರಿಂದ 30.03.2026 ರವರೆಗೆ The Second Vietnam International Symposium on Medicinal Plants and Natural Products (MPNP 2026), Quy Nhon Nam, Gia Lai, Vietnam ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಮೌಖಿಕ ಪ್ರಸ್ತುತಿ (Oral Presentation) ನೀಡಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಅನ್ಯಕಾರ್ಯ ನಿಮಿತ್ತ (OOD) ಹೋಗಿ ಬರಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(03/26) |

## –: ಟಿಪ್ಪಣಿ :–

ವಿಷಯಃ **ಪ್ರೊ. ಗೋಪಿನಾಥ್ ಎಸ್. ಎಂ., ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖಃ
1. ಪ್ರೊ. ಗೋಪಿನಾಥ್ ಎಸ್.ಎಂ., ಪ್ರಾಧ್ಯಾಪಕರು ಇವರ ಮನವಿ ದಿನಾಂಕಃ 04.02.2026
2. ವಿ.ವಿ. ಕಛೇರಿ ಜ್ಞಾಪನ ಸಂಖ್ಯೆಃ ದಾವಿವಿ/ಮಾಸನಿ/459/2025-26/5054, ದಿನಾಂಕಃ 06.02.2026

*********

ಪ್ರೊ. ಗೋಪಿನಾಥ್ ಎಸ್.ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರಿಗೆ ದಿನಾಂಕಃ14.02.2026 ರಿಂದ 18.02.2026 ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲು ಆಹ್ವಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕಃ13.02.2026 ರಿಂದ 18.02.2026ರವರೆಗೆ (ಪ್ರಯಾಣ ದಿನಗಳನ್ನು ಸೇರಿಸಿ) ಹೋಗಿ ಬರಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಉಲ್ಲೇಖ (2)ರ ಜ್ಞಾಪನ ಪತ್ರದಲ್ಲಿ ಪ್ರೊ. ಗೋಪಿನಾಥ್ ಎಸ್.ಎಂ., ಪ್ರಾಧ್ಯಾಪಕರು ಇವರಿಗೆ ದಿನಾಂಕಃ13.02.2026 ರಿಂದ 18.02.2026 (ಪ್ರಯಾಣ ದಿನಗಳನ್ನು ಸೇರಿಸಿ) ರವರೆಗೆ Thailand ನಲ್ಲಿ ಆಯೋಜಿಸಿರುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಆರ್ಥಿಕ ಸೌಲಭ್ಯ ರಹಿತ ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ ರಜೆ ಮಂಜೂರು ಮಾಡಲಾಗಿದೆ. ತತ್ಸಂಬಂಧ ದಿನಾಂಕಃ 12.03.2026 ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ಪ್ರೊ. ಗೋಪಿನಾಥ್ ಎಸ್.ಎಂ., ಪ್ರಾಧ್ಯಾಪಕರು, ಸ್ನಾತಕೋತ್ತರ ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ದಿನಾಂಕಃ13.02.2026 ರಿಂದ 18.02.2026 ರವರೆಗೆ International House of Education, Bengaluru ಮತ್ತು Suranaree University of Technology, Thailand ಇವರುಗಳ ಸಹಯೋಗದೊಂದಿಗೆ Thailand ನಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ವಿಶೇಷ ಉಪನ್ಯಾಸ ನೀಡಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ (OOD) ಅನ್ಯಕಾರ್ಯ ನಿಮಿತ್ತ ಹೋಗಿ ಬಂದಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(03/26) |

## –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಯನ್ನು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಕೋಶಕ್ಕೆ ನಿರ್ದೇಶಕರನ್ನು ನಾಮನಿರ್ದೇಶನ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿ/ಮಾಸನಿ/634/2025–26/ 5083, ದಿನಾಂಕ: 24.02.2026
2. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಮಾಸನಿ/634/ 2025–26/ 5078, ದಿನಾಂಕ: 24.02.2026
3. ವಿ.ವಿ. ಅಧಿಕೃತ ಜ್ಞಾಪನ ಸಂಖ್ಯೆ: ದಾವಿವಿ/ಪಿ.ಹೆಚ್.ಡಿ./ 1110/2025–26/ 5087, ದಿನಾಂಕ: 24.02.2026

*********

ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಅಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರನ್ನು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲಬುರ್ಗಿಯ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ನೇಮಕ ಮಾಡಿರುವ ಹಿನ್ನೆಲೆಯಲ್ಲಿ ಉಲ್ಲೇಖಿತ (1)ರ ಅಧಿಕೃತ ಜ್ಞಾಪನ ಪತ್ರದಲ್ಲಿ ಸದರಿಯವರನ್ನು ದಾವಣಗೆರೆ ವಿಶ್ವವಿದ್ಯನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕರ ಹುದ್ದೆಯಿಂದ ದಿನಾಂಕ:24.02.2026ರಂದು ಬಿಡುಗಡೆಗೊಳಿಸಲಾಗಿದೆ.

ಮುಂದುವರೆದು ಉಲ್ಲೇಖಿತ (2)ರ ಜ್ಞಾಪನ ಪತ್ರದಲ್ಲಿ **ಡಾ. ಹೊನ್ನೂರಸ್ವಾಮಿ ಹೆಚ್., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ – ಇವರನ್ನು ಸದರಿ ವಿಭಾಗದ ಸಂಯೋಜನಾಧಿಕಾರಿಯಾಗಿ ಹಾಗೂ ಉಲ್ಲೇಖಿತ (03)ರ ಜ್ಞಾಪನ ಪತ್ರದಲ್ಲಿ ಡಾ. ಹುಚ್ಚೇಗೌಡ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಸಂಶೋಧನೆ ಮತ್ತು ಅಭಿವೃದ್ಧಿ ಕೋಶಕ್ಕೆ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ**. ತತ್ಸಂಬಂಧ ದಿನಾಂಕ:12.03.2026 ರಂದು ನಡೆಯುವ ಸಿಂಡಿಕೇಟ್ ಸಭೆಯ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಡಾ. ಹೊನ್ನೂರಸ್ವಾಮಿ ಹೆಚ್., ಸಹಾಯಕ ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ ಇವರನ್ನು ಸ್ನಾತಕೋತ್ತರ ಇತಿಹಾಸ ಮತ್ತು ಪುರತತ್ವ ಅಧ್ಯಯನ ವಿಭಾಗಕ್ಕೆ ಸಂಯೋಜನಾಧಿಕಾರಿಯನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಹಾಗೂ ಪ್ರೊ. ಹುಚ್ಚೇಗೌಡ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಸಂಶೋಧನೆ ಮತ್ತು ಅಭಿವೃದ್ಧಿ ಕೋಶದ ನಿರ್ದೇಶಕರನ್ನಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದನೆ ನೀಡಿತು.

ಕುಲಸಚಿವರು — ಕುಲಪತಿಗಳು

| ಮಾ.ಸ.ನಿ. ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(03/26) |

## –ಃ ಟಿಪ್ಪಣಿ ಃ–

**ವಿಷಯಃ ಗಳಿಕೆ ರಜೆ ನಗದೀಕರಣ ಸೌಲಭ್ಯ ಮಂಜೂರು ಮಾಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖ:
1. ಪ್ರೊ. ವೆಂಕಟರಾವ್ ಎಂ. ಪಲಾಟಿ, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆ:ದಾವಿವಿ/ಇತಿಹಾಸ/2025-26/430, ದಿನಾಂಕಃ 18.02.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ23.02.2026

*********

ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಅಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯ, ಕಲಬುರ್ಗಿಯ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಾತಿ ಹೊಂದಿರುವ ಕಾರಣ ತಮ್ಮ ಖಾತೆಯಲ್ಲಿರುವ ಗಳಿಕೆ ರಜೆಗಳು ಕೇಂದ್ರೀಯ ವಿಶ್ವವಿದ್ಯಾನಿಲಯಕ್ಕೆ Carry Forward ಆಗದೆ ಇರುವ ಕಾರಣ ಒಟ್ಟು 220 ಗಳಿಕೆ ರಜೆಗಳ ನಗಧೀಕರಣ ಸೌಲಭ್ಯ ಮಂಜೂರು ಮಾಡುವಂತೆ ಉಲ್ಲೇಖಿತ (01)ರ ಪತ್ರದಲ್ಲಿ ಕೋರಿರುತ್ತಾರೆ.

ಈ ಕುರಿತು ಕೆ.ಸಿ.ಎಸ್. ನಿಯಮ 118 (2) (i) ರನ್ವಯ ಸರ್ಕಾರಿ ನೌಕರನು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ (ಆಯಾ ವರ್ಷದ ಜನವರಿ 1 ರಿಂದ ಪ್ರಾರಂಭಗೊಂಡಂತೆ ಡಿಸೆಂಬರ್ 31ರವರೆಗೆ) 15 ದಿನಗಳಿಗೆ ಮೀರದ ಗಳಿಕೆ ರಜೆಯನ್ನು ಅಧ್ಯರ್ಪಿಸಿ ರಜಾ ವೇತನಕ್ಕೆ ಸಮನಾದ ನಗಧೀಕರಣ ಸೌಲಭ್ಯವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ. ಮುಂದುವರೆದು ಸದರಿಯವರನ್ನು ಧಾರಣಾಧಿಕಾರ (Lien) ದ ಮೇಲೆ ಬಿಡುಗಡೆ ಮಾಡಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ 220 ಗಳಿಕೆ ರಜೆಗಳ ನಗಧೀಕರಣ ಸೌಲಭ್ಯವನ್ನು ಮಂಜುರು ಮಾಡುವ ಬಗ್ಗೆ ದಿನಾಂಕಃ12.03.2026 ರಂದು ನಡೆಯುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ.

### :: ನಿರ್ಣಯ ::

ಪ್ರೊ. ವೆಂಕಟರಾವ್ ಮಾರುತಿರಾವ್ ಪಲಾಟೆ, ಅಧ್ಯಾಪಕರು ಹಾಗೂ ಅಧ್ಯಕ್ಷರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರ ಖಾತೆಯಲ್ಲಿರುವ 220 ಗಳಿಗೆ ರಜೆ ನಗದೀಕರಣ ಸೌಲಭ್ಯಕ್ಕೆ ಸಂಬಂಧಿಸಿದಂತೆ HRMS ಮೂಲಕ ಅಥವಾ ಆಂತರಿಕ ಸಂಪನ್ಮೂಲದಿಂದ ಕೆ.ಸಿ.ಎಸ್. ನಿಯಮಾನುಸಾರ ಮುಂದಿನ ಕ್ರಮವಹಿಸಲು ಸಭೆಯು ನಿರ್ಣಯಿಸಿತು.

ಕುಲಸಚಿವರು　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.02(f)/(03/26) |

## –ಃ ಟಿಪ್ಪಣಿ ಃ–

**ವಿಷಯಃ ವಯೋನಿವೃತ್ತಿ ಹೊಂದಲಿರುವ ಅಧ್ಯಾಪಕ/ಅಧ್ಯಾಪಕೇತರ ನೌಕರರಿಗೆ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧ್ಯಾಪಕ/ಅಧ್ಯಾಪಕೇತರ ನೌಕರರು ವಯೋನಿವೃತ್ತಿ ಹೊಂದಲಿರುವುದರಿಂದ, ಸದರಿಯವರನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಲು ಹಾಗೂ ಸದರಿಯವರಿಗೆ ನಿಯಮಾನುಸಾರ ಲಭ್ಯವಿರುವ ಆರ್ಥಿಕ ಸೌಲಭ್ಯಗಳನ್ನು ಮಂಜೂರು ಮಾಡಿ ಪಾವತಿಸುವ ಸಂಬಂಧ ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ. ಸದರಿಯವರ ಸೇವಾ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ.

| ಕ್ರ. ಸಂ. | ನೌಕರರ ಹೆಸರು ಹಾಗೂ ಹುದ್ದೆ | ಹುಟ್ಟಿದ ದಿನಾಂಕ | ನಿವೃತ್ತಿ ದಿನಾಂಕ |
|---|---|---|---|
| 1 | ಡಾ. ಮಮತಾ ಜಿ.ಪಿ<br>ಪ್ರಾಧ್ಯಾಪಕರು. | 19.05.1964 | 31.05.2026 |
| 2 | ಡಾ. ವಿಶ್ವನಾಥ್ ಹೆಚ್<br>ಪ್ರಾಧ್ಯಾಪಕರು. | 06.07.1964 | 31.07.2026 |
| 3 | ಡಾ. ಶಿಶುಪಾಲ್ ಎಸ್<br>ಪ್ರಾಧ್ಯಾಪಕರು. | 09.08.1964 | 31.08.2026 |
| 4 | ಶ್ರೀ ಎಲ್ ಹನುಮಂತರಾಯ<br>ಅಧೀಕ್ಷಕರು | 15.05.1966 | 31.05.2026 |
| 5 | ಶ್ರೀ ಡಿ.ಎನ್ ಪ್ರಕಾಶ್<br>ಉಪಕುಲಸಚಿವರು | 22.07.1966 | 31.07.2026 |
| 6 | ಶ್ರೀ ರಂಗಸ್ವಾಮಿ ಆರ್ ಎಲ್<br>ಅಧೀಕ್ಷಕರು | 18.11.1966 | 30.11.2026 |

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ಈ ಮೇಲ್ಕಂಡ ಪಟ್ಟಿಯಲ್ಲಿ ನಮೂದಿಸಿರುವಂತೆ ಅಧ್ಯಾಪಕ/ಅಧ್ಯಾಪಕೇತರ ನೌಕರರು ವಯೋನಿವೃತ್ತಿ ಹೊಂದಲಿರುವುದರಿಂದ, ಸದರಿಯವರುಗಳನ್ನು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆಗೊಳಿಸಲು ನಿರ್ಣಯಿಸಿತು ಹಾಗೂ ಆರ್ಥಿಕ ಸೌಲಭ್ಯಗಳ ಮಂಜೂರಾತಿ ಕುರಿತು ಸರ್ಕಾರಕ್ಕೆ ಪತ್ರಿಸಿ ಮುಂದಿನ ಕ್ರಮವಹಿಸುವಂತೆ ನಿರ್ಣಯಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.04(g)/(03/26) |

## –: ಟಿಪ್ಪಣಿ :–

ವಿಷಯಃ 7ನೇ ರಾಜ್ಯವೇತನ ಶ್ರೇಣಿಯನ್ನು ಸಂಚಿತ ವೇತನ ಸಿಬ್ಬಂದಿಗೆ ವಿಸ್ತರಿಸಿ ವೇತನ ಪಾವತಿಸುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆಃ ಆಇ 21 ಎಸ್.ಆರ್.ಪಿ. 2024, ದಿನಾಂಕ:22.07.2024
2. ಶ್ರೀ ಕೆ. ಮಂಜುನಾಥ ಅಟೆಂಡರ್ ಇವರ ಮನವಿ ದಿನಾಂಕ:04.02.2025
3. ಶ್ರೀ ಶೋಭನಾಯ್ಕ್ ಮತ್ತು ಶ್ರೀ ಪ್ರಶಾಂತ ವಿ. ಹಂಗಾಮಿ ಕಿರಿಯ ಸಹಾಯಕರು ಇವರ ಮನವಿ ದಿನಾಂಕ:13.02.2026
4. ಮಾನ್ಯಕುಲಪತಿಗಳ ಅನುಮೋದನೆ ದಿನಾಂಕಃ 23.02.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದ ಕೆಲವು ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಂಗಾಮಿ ಕಿರಿಯ ಸಹಾಯಕರ ಹಾಗೂ ಹಂಗಾಮಿ ಅಟೆಂಡರ್ ಇವರುಗಳಿಗೆ ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ 7ನೇ ಪರಿಷ್ಕೃತ ವೇತನವನ್ನು ನೀಡುವಂತೆ ಕೋರಿರುತ್ತಾರೆ.

ಆದ್ದರಿಂದ ಈ ಕೆಳಕಂಡ ನೌಕರರುಗಳಿಗೆ 7ನೇ ಪರಿಷ್ಕೃತ ವೇತನವನ್ನು ಜಾರಿಗೊಳಿಸಿ ನಿಯಮಾನುಸಾರ ವೇತನ ಪಾವತಿ ಮಾಡಲು ದಿನಾಂಕಃ 12.03.2026ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

<u>ನೌಕರರ ವಿವರ</u>

| ಕ್ರ.ಸಂ. | ಹೆಸರು | ಹುದ್ದೆ | |
|---|---|---|---|
| 1 | ಶ್ರೀ ಶೋಭ್ಯನಾಯ್ಕ್ ಹೆಚ್ | ಕಿರಿಯ ಸಹಾಯಕರು | ಸಂಚಿತ ವೇತನ |
| 2 | ಶ್ರೀ ಪ್ರಶಾಂತ ವಿ. | ಕಿರಿಯ ಸಹಾಯಕರು | |
| 3 | ಶ್ರೀ ಮಂಜುನಾಥ ಕೆ | ಟೆಂಡರ್ | |

### :: ನಿರ್ಣಯ ::

ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ ಈ ಮೇಲ್ಕಂಡ 03 ಹಂಗಾಮಿ ನೌಕರರುಗಳಿಗೆ 7ನೇ ರಾಜ್ಯ ವೇತನ ಶ್ರೇಣಿಯನ್ನು ಜಾರಿಗೊಳಿಸಲು ನಿಯಮಾನುಸಾರ ಷರತ್ತುಗಳನ್ನು ವಿಧಿಸಿ ಆಡಿಟ್ ಆಕ್ಷೇಪಣೆಗಳಿಗೊಳಪಟ್ಟು ನೌಕರರಿಂದ ಮುಚ್ಚಳಿಕೆ ಪತ್ರ ಪಡೆದು ಸದರಿ ಸಿಂಡಿಕೇಟ್ ದಿನಾಂಕದಿಂದ 7ನೇ ರಾಜ್ಯ ವೇತನ ಶ್ರೇಣಿಯನ್ನು ಜಾರಿಗೊಳಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು　　　　　　　　　　　　ಕುಲಪತಿಗಳು

| ಮಾ.ಸ.ನಿ. ವಿಭಾಗ – 16 | |
|---|---|
| ವಿಷಯ ಸಂಖ್ಯೆ: | ಸಿಂ.02(h)/(03/26) |

## –ಃ ಟಿಪ್ಪಣಿ ಃ–

ವಿಷಯಃ **2025–26ನೇ ಸಾಲಿನ ವಿಶ್ವವಿದ್ಯಾನಿಲಯ ಘಟಕ ಕಾಲೇಜು ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಣೆ ಮಾಡುವ ಕುರಿತು.**

ಉಲ್ಲೇಖ:
1. ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯ ದಿನಾಂಕಃ09.09.2025
2. ವಿವಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ದಾವಿವಿ/ಮಾಸನಿ/550/ 2025–26/3154 ದಿನಾಂಕಃ13.10.2025
3. ಸಿಂಡಿಕೇಟ್ ಸಾಮಾನ್ಯ ಸಭೆಯ ನಿರ್ಣಯ ದಿನಾಂಕಃ30.12.2025
4. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ23.01.2026

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜು ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ ಅತಿಥಿ ಉಪನ್ಯಾಸಕರ ವೇತನ ನಿಗಧಿಪಡಿಸುವ ಕುರಿತಂತೆ ಉಲ್ಲೇಖ (1)ರ ಸಿಂಡಿಕೇಟ್ ನಿರ್ಣಯವನ್ನು ಕಲಾ ಮತ್ತು ವಾಣಿಜ್ಯ ವಾರಕ್ಕೆ 16 ಗಂಟೆಗಳಂತೆ ಮತ್ತು ವಿಜ್ಞಾನದ ವಿಷಯಗಳಿಗೆ ವಾರಕ್ಕೆ 20 ಗಂಟೆಗಳಂತೆ ವೇತನವನ್ನು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಪರಿಷ್ಕರಿಸಿ ಉಲ್ಲೇಖ (2) ರನ್ವಯ ಅಧಿಕೃತ ಜ್ಞಾಪನ ನೀಡಲಾಗಿದೆ ಮುಂದುವರೆದು ದೃಶ್ಯಕಲಾ ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳ ಮನವಿಯ ಮೇರೆಗೆ ಉಲ್ಲೇಖ (3)ರ ಸಿಂಡಿಕೇಟ್ ನಿರ್ಣಯದಾನುಸಾರ 10 ವರ್ಷಕ್ಕಿಂತ ಹೆಚ್ಚು, 10 ರಿಂದ 05 ವರ್ಷ, 5 ರಿಂದ 3 ಹಾಗೂ 3 ವರ್ಷಗಳಿಗಿಂತ ಕಡಿಮೆ ಬೋಧನಾ ಅನುಭವನ್ನು ಪರಿಗಣಿಸಿ ವೇತನ ನಿಗದಿಪಡಿಸಲು ಕ್ರಮವಹಿಸಬೇಕಾಗಿರುತ್ತದೆ. ಭೋಧನಾ ಅನುಭವದ ಜೊತೆಗೆ ವಿಧ್ಯಾರ್ಹತೆ: Ph.D./ PG + NET /K –SET/ SLET/ PG ಮಾತ್ರ ಪರಿಗಣಿಸಿ ಪೂರ್ಣಕಾಲಿಕ ಮತ್ತು ಅರೆಕಾಲಿಕ ಅತಿಥಿ ಉಪನ್ಯಾಸಕರುಗಳಿಗೆ ಸದರಿ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ವೇತನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| Full Time | | | | | | | |
|---|---|---|---|---|---|---|---|
| ಕ್ರಸಂ | ಭೋದನಾ ಅನುಭವ ವರ್ಷಗಳಲ್ಲಿ | Ph.D. ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | Ph.D. ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised | PG + NET /K –SET/ SLET ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | PG + NET / K –SET/SLET ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised | PG ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | PG ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised |
| 01 | 10 ವರ್ಷ ಅಥವಾ ಹೆಚ್ಚು | ರೂ. 27,000/– | ರೂ. 29,000/– | ರೂ. 23,000/– | ರೂ. 25,000/– | ರೂ. 15,000/– | ರೂ. 20,000/– |
| 02 | 05 ವರ್ಷ ದಿಂದ 10 ವರ್ಷದೊಳಗೆ | ರೂ. 23,000/– | ರೂ. 25,000/– | ರೂ. 22,000/– | ರೂ. 23,000/– | ರೂ. 15,000/– | ರೂ. 18,000/– |
| 03 | 03 ವರ್ಷ ದಿಂದ 05 ವರ್ಷದೊಳಗೆ | ರೂ. 23,000/– | ರೂ. 23,000/– | ರೂ. 22,000/– | ರೂ. 22,000/– | ರೂ. 15,000/– | ರೂ. 17,000/– |
| 04 | 03 ವರ್ಷದೊಳಗೆ | ರೂ. 23,000/– | ರೂ. 23,000/– | ರೂ. 22,000/– | ರೂ. 22,000/– | ರೂ. 15,000/– | ರೂ. 16,000/– |

*ಮುಂದುವರೆದಿದೆ..*

ಕುಲಸಚಿವರು　　　　ಕುಲಪತಿಗಳು

| Part Time | | | | | | | |
|---|---|---|---|---|---|---|---|
| ಕ್ರ.ಸಂ | ಬೋಧನಾ ಅನುಭವ ವರ್ಷಗಳಲ್ಲಿ | **Ph.D.** ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | **Ph.D.** ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised | PG + NET /K –SET/SLET ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | PG + NET/K – SET/SLET ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised | PG ಹೊಂದಿದ ಅಭ್ಯರ್ಥಿಗಳಿಗೆ ಪ್ರಸ್ತುತಾ ನಿಗದಿ ಪಡಿಸಿರುವ ವೇತನ Existing | PG ಹೊಂದಿದ ಅಭ್ಯರ್ಥಿಗಳಿಗೆ ಪರಿಷ್ಕರಿಸಿ ನಿಗದಿಪಡಿಸಬೇಕಾದ ವೇತನ Revised |
| | | **Per Hour – UG (16 Hrs per week) For Arts and Commerce** | **Per Hour – UG (16 Hrs per week) For Arts and Commerce** | **Per Hour – UG (16 Hrs per week) For Arts and Commerce** | | **Per Hour – UG (16 Hrs per week) For Arts and Commerce** | |
| 01 | 10 ವರ್ಷ ಅಥವಾ ಹೆಚ್ಚು | Rs. 400 Per Hr | Rs. 420 Per Hr | Rs. 350 per Hr | Rs. 375 per Hr | Rs.230 per Hr | Rs.310 per Hr |
| 02 | 05 ವರ್ಷ ದಿಂದ 10 ವರ್ಷದೊಳಗೆ | Rs. 380 per Hr | Rs. 390 Per Hr | Rs. 350 per Hr | Rs. 359 per Hr | Rs.230 per Hr | Rs.280 per Hr |
| 03 | 03 ವರ್ಷ ದಿಂದ 05 ವರ್ಷದೊಳಗೆ | Rs. 350 per Hr | Rs. 359 Per Hr | Rs. 335 per Hr | Rs. 342 per Hr | Rs.230 per Hr | Rs.265 per Hr |
| 04 | 03 ವರ್ಷದೊಳಗೆ | Rs. 350 per Hr | Rs. 359 Per Hr | Rs. 335 per Hr | Rs. 342 per Hr | Rs.230 per Hr | Rs.265 per Hr |

ಪರಿಷ್ಕೃತ ವೇತನವನ್ನು ವಿಶ್ವವಿದ್ಯಾನಿಲಯ ವ್ಯಾಪ್ತಿಗೊಳಪಡುವ ಮೂರು ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸುವ ಕುರಿತು ದಿನಾಂಕಃ12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಚರ್ಚೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

- **ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು** ಇವರು – ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಒಂದೇ ರೀತಿಯ ಆದೇಶ ನೀಡುವಂತೆ ಪುನಃ ಚರ್ಚಿಸಿ ಕ್ರಮವಹಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿ ಈ ಕುರಿತು ಮುಂದಿನ ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಕೋರಿದರು.

  ಪ್ರಸ್ತುತ ನೀಡುತ್ತಿರುವ ವೇತನವನ್ನು ಯಥಾ ಸ್ಥಿತಿ ಕಾಪಾಡುವಂತೆ ಹಾಗೂ ಸದರಿ ವಿಷಯವನ್ನು ಚರ್ಚಿಸಿ ಕ್ರಮವಹಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

**:: ನಿರ್ಣಯ ::**

ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.02(i)/(03/26) |

# –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯದ ಮಹಿಳಾ ಸಿಬ್ಬಂದಿಗಳಿಗೆ ಋತುಚಕ್ರ ರಜೆ ಮಂಜೂರು ಮಾಡುವ ಬಗ್ಗೆ.**

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಕಾಇ 466 ಎಲ್ಇಟಿ 2023, ದಿನಾಂಕ:12.11.2025
2. ಸರ್ಕಾರದ ಆದೇಶ ಸಂಖ್ಯೆ: ಆಇ 10 ಸೇನಿಸೇ 2025, ದಿನಾಂಕ:02.12.2025
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 03.03.2026

*********

ಸರ್ಕಾರದ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ – ಇವರು ರಾಜ್ಯದ ವಿವಿಧ ಕಾರ್ಮಿಕ ಕಾಯ್ದೆಗಳಡಿ ನೋಂದಣಿಯಾಗಿರುವ ಎಲ್ಲಾ ಕೈಗಾರಿಕೆಗಳು ಹಾಗೂ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ/ಗುತ್ತಿಗೆ/ಹೊರಗುತ್ತಿಗೆ ಮಹಿಳಾ ನೌಕರರಿಗೆ ಋತುಚಕ್ರದ ಸಮಯದಲ್ಲಿ ಪ್ರತಿ ತಿಂಗಳು ಒಂದು ದಿನದಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯ ಸೌಲಭ್ಯವನ್ನು ಉಲ್ಲೇಖಿತ (1)ರ ಆದೇಶದಲ್ಲಿ ಮಂಜೂರು ಮಾಡಿರುತ್ತಾರೆ. ಮುಂದುವರೆದು ರಾಜ್ಯದ ಮಹಿಳಾ ಸರ್ಕಾರಿ ನೌಕರರಿಗೆ ಪ್ರತಿ ತಿಂಗಳು ಒಂದು ದಿನದಂತೆ ಋತುಚಕ್ರ ರಜೆಯ ಸೌಲಭ್ಯವನ್ನು ಕೆಲವು ಷರತ್ತಿಗೊಳಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಉಲ್ಲೇಖಿತ (2)ರ ಆದೇಶದಲ್ಲಿ ಮಂಜೂರು ಮಾಡಿರುತ್ತಾರೆ.

ತತ್ಸಂಬಂಧ, ಮಾನ್ಯ ಕುಲಪತಿಗಳ ಆದೇಶಾನುಸಾರ ಸರ್ಕಾರದ ಉಲ್ಲೇಖಿತ (1) ಮತ್ತು (2)ರ ಆದೇಶದನ್ವಯ ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ಖಾಯಂ ಅಧ್ಯಾಪಕ/ಅಧ್ಯಾಪಕೇತರ ಹಾಗೂ ಹೊರಗುತ್ತಿಗೆ ಮಹಿಳಾ ಸಿಬ್ಬಂದಿಗಳಿಗೆ ಪ್ರತಿ ತಿಂಗಳು ಒಂದು ದಿನದ ಋತುಚಕ್ರ ರಜೆಯ ಸೌಲಭ್ಯವನ್ನು ವೇತನಸಹಿತ ಮಂಜೂರು ಮಾಡುವ ಬಗ್ಗೆ ದಿನಾಂಕ: 12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 18 ರಿಂದ 52 ವರ್ಷದ ವಯೋಮಿತಿಯ ಎಲ್ಲಾ ಖಾಯಂ/ಗುತ್ತಿಗೆ/ಹೊರಗುತ್ತಿಗೆ ಮಹಿಳಾ ನೌಕರರಿಗೆ ಋತುಚಕ್ರದ ಸಮಯದಲ್ಲಿ ಪ್ರತಿ ತಿಂಗಳು ಒಂದು ದಿನದಂತೆ ವಾರ್ಷಿಕ 12 ದಿನಗಳ ವೇತನ ಸಹಿತ ರಜೆಯನ್ನು ಸರ್ಕಾರದ ಉಲ್ಲೇಖ (1) ಮತ್ತು (2) ರ ಆದೇಶಾನುಸಾರ ಮಂಜೂರು ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಸಿಂ.02(j)/(03/26) |

## –: ಟಿಪ್ಪಣಿ :–

**ವಿಷಯ: ಯುಜಿಸಿ ಸಿಎಎಸ್ ಯೋಜನೆಯಡಿ ವೃತ್ತಿ ಪದೋನ್ನತಿ ಪಡೆದ ಅಧ್ಯಾಪಕರುಗಳ ಅರ್ಹತಾ ದಿನಾಂಕವನ್ನು ಪರಿಷ್ಕರಿಸುವಂತೆ ಕೋರಿರುವ ಬಗ್ಗೆ.**

ಉಲ್ಲೇಖ: 1. ಅಧ್ಯಾಪಕರುಗಳ ಮನವಿ ಪತ್ರ.
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:05.03.2026

*********

ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧ್ಯಾಪಕರುಗಳು ತಮಗೆ ಯುಜಿಸಿ ಸಿಎಎಸ್ ಯೋಜನೆಯಡಿ ಸಹ ಪ್ರಾಧ್ಯಾಪಕ ಹುದ್ದೆಯಿಂದ ಪ್ರಾಧ್ಯಾಪಕ ಹುದ್ದೆಗೆ ನೀಡಿರುವ ವೃತ್ತಿ ಪದೋನ್ನತಿಯ ಅರ್ಹತಾ ದಿನಾಂಕವನ್ನು ಯುಜಿಸಿ–2018ರ ನಿಯಮಾವಳಿಗಳ 4ನೇ ತಿದ್ದುಪಡಿ ಅನ್ವಯ ಹಿಂದಿನ ಸೇವೆಯನ್ನು ಪರಿಗಣಿಸಿ ಅರ್ಹತಾ ದಿನಾಂಕವನ್ನು ಈ ಕೆಳಕಂಡಂತೆ ಪರಿಷ್ಕರಿಸಲು ಕೋರಿರುತ್ತಾರೆ.

| ಕ್ರ. ಸಂ. | ಹೆಸರು | ವಿಭಾಗ | ಪದೋನ್ನತಿ ನೀಡಿರುವ ಅರ್ಹತಾ ದಿನಾಂಕ | ಪರಿಷ್ಕರಿಸುವ ಅರ್ಹತಾ ದಿನಾಂಕ |
|---|---|---|---|---|
| 01 | ಡಾ. ಕೆ.ಎಂ. ಈಶ್ವರಪ್ಪ | ಭೌತಶಾಸ್ತ್ರ | 01.06.2022 | 24.07.2021 |
| 02 | ಡಾ. ಬಸವಣ್ಣ ಎಂ. | ಗಣಕ ವಿಜ್ಞಾನ | 21.11.2023 | 19.12.2022 |
| 03 | ಡಾ. ಸುಪ್ರಿಯ ಆರ್. | ವಾಣಿಜ್ಯಶಾಸ್ತ್ರ | 22.05.2023 | 27.06.2022 |
| 04 | ಡಾ. ಸತ್ಯನಾರಾಯಣ | ವಾಣಿಜ್ಯಶಾಸ್ತ್ರ | 27.03.2023 | 29.06.2022 |
| 05 | ಡಾ. ವೆಂಕಟೇಶ ಕೆ. | ಶಿಕ್ಷಣ | 06.03.2024 | 24.05.2022 |
| 06 | ಡಾ. ಶಿವಕುಮಾರ ಕಣಸೋಗಿ | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ | 24.02.2023 | 24.05.2022 |
| 07 | ಡಾ. ಕೊಟ್ರೇಶ ಡಿ. | ಸಸ್ಯಶಾಸ್ತ್ರ | 24.09.2024 | 27.06.2022 |
| 08 | ಡಾ. ಶಿವಲಿಂಗಪ್ಪ ಬಿ.ಪಿ. | ಸಮಾಜಕಾರ್ಯ | 19.05.2023 | 25.06.2022 |
| 09 | ಡಾ. ಸೀಮ ಜೆ. ಪಟೇಲ್ | ಜೈವಿಕತಂತ್ರಜ್ಞಾನ | 13.02.2024 | 15.07.2022 |
| 10 | ಡಾ. ನಿರಂಜನ ಎಂ. ಹೆಚ್. | ಜೈವಿಕತಂತ್ರಜ್ಞಾನ | 22.11.2024 | 17.07.2022 |
| 11 | ಡಾ. ಆರ್. ಸೆಲ್ವಿ | ಅರ್ಥಶಾಸ್ತ್ರ | 27.11.2023 | 16.07.2022 |
| 12 | ಡಾ. ಬಿ.ಪಿ. ನಂದೀಶ್ವರಪ್ಪ | ರಸಾಯನಶಾಸ್ತ್ರ | 14.06.2023 | 19.08.2022 |
| 13 | ಡಾ. ಪ್ರಮೋದ್ ಎಸ್.ಎನ್. | ಆಹಾರತಂತ್ರಜ್ಞಾನ | 16.01.2023 | 21.08.2022 |
| 14 | ಡಾ. ಮಲ್ಲಿಕಾರ್ಜುನ ಕೆ. | ಕನ್ನಡ | 04.02.2025 | 02.12.2022 |
| 15 | ಡಾ. ಜಯರಾಮಯ್ಯ ವಿ. | ಕನ್ನಡ | 30.01.2025 | 04.12.2022 |
| 16 | ಡಾ. ವಿಶ್ವನಾಥ ಹೆಚ್. | ಕನ್ನಡ | 30.01.2025 | 02.12.2022 |

ತತ್ಸಂಬಂಧ, ಮಾನ್ಯ ಕುಲಪತಿಗಳ ನಿರ್ದೇಶಾನುಸಾರ ಮೇಲ್ಕಂಡ ಪ್ರಾಧ್ಯಾಪಕರುಗಳ ಅರ್ಹತಾ ದಿನಾಂಕವನ್ನು ಯಾವುದೇ ರೀತಿಯ ಆರ್ಥಿಕ ಸೌಲಭ್ಯಗಳಿಲ್ಲದೇ ಪರಿಷ್ಕರಿಸುವ ಬಗ್ಗೆ ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ಸದರಿ ವಿಷಯವನ್ನು ಮುಂದೂಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.02(k)/(03/26) |

## –: ಟಿಪ್ಪಣಿ :–

ವಿಷಯ: ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಇವರು – **Post-Doctoral Fellowship** ಗೆ ಅರ್ಜಿ ಸಲ್ಲಿಸಲು ಹಾಗೂ PDF ಮಾಡಲು ಅನುಮತಿ ನೀಡುವಂತೆ ಕೋರಿರುವ ಕುರಿತು.

ಉಲ್ಲೇಖ:
1. ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು ಇವರ ಮನವಿ ದಿನಾಂಕ: 03.02.2026.
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 02.03.2026

*********

ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ ಇವರು ಮಂಗಳೂರಿನ Yenepoya Research Center (YRC) ನ ಪ್ರಾಧ್ಯಾಪಕ ಹಾಗೂ ಉಪ ನಿರ್ದೇಶಕರಾದ ಡಾ. ಯಶೋಧರ್ ಪಿ. ಭಂಡಾರಿ ಇವರ ಮಾರ್ಗದರ್ಶನದಡಿ ಪೋಸ್ಟ್ ಡಾಕ್ಟರಲ್ ಸಂಶೋಧನೆ ನಡೆಸಲು ಯುಜಿಸಿಯ ವ್ಯಾಸಂಗ ರಜೆ (02 ವರ್ಷಗಳ ಅವಧಿ) ನಿಯಮದಡಿ Post-Doctoral Fellowship ಗೆ ಅರ್ಜಿ ಸಲ್ಲಿಸಲು ಹಾಗೂ PDF ಮಾಡಲು ಅನುಮತಿ ನೀಡುವಂತೆ ಉಲ್ಲೇಖಿತ (1)ರ ಪತ್ರದಲ್ಲಿ ಅಧ್ಯಕ್ಷರ ಮುಖಾಂತರ ಕೋರಿರುತ್ತಾರೆ.

ತತ್ಸಂಬಂಧ ಮಾನ್ಯ ಕುಲಪತಿಗಳ ಆದೇಶಾನುಸಾರ ಡಾ. ಮಾನಸ ಡಿ.ಜೆ, ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಇವರಿಗೆ ಮಂಗಳೂರಿನ Yenepoya Research Center (YRC) ನಲ್ಲಿ Post-Doctoral Fellowship ಗೆ ಅರ್ಜಿ ಸಲ್ಲಿಸಲು ಅನುಮತಿ ನೀಡುವ ಬಗ್ಗೆ ದಿನಾಂಕ:12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಸದರಿ ವಿಷಯವನ್ನು ಮುಂದೂಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು          ಕುಲಪತಿಗಳು

| ಮಾ.ಸ.ನಿ. ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.02(1)/(03/26) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ "ಮಹಿಳಾ ಘಟಕ" ರಚಿಸುವ ಕುರಿತು.**

ಉಲ್ಲೇಖ:
1. ವಿಶ್ವವಿದ್ಯಾನಿಲಯದ ಮಹಿಳಾ ಬೋಧಕ/ಬೋಧಕೇತರ ನೌಕರರ ಮನವಿ ದಿನಾಂಕ:03.03.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 09.03.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದಲ್ಲಿ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಬೋಧಕ/ಬೋಧಕೇತರ ನೌಕರರು ವಿಶ್ವವಿದ್ಯಾನಿಲಯದಲ್ಲಿ "ಮಹಿಳಾ ಘಟಕ"ವನ್ನು ರಚಿಸಿಕೊಡುವಂತೆ ಕೋರಿರುತ್ತಾರೆ ಈ ಕುರಿತು ದಿನಾಂಕ: 12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಗೆ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಬೋಧಕ/ಬೋಧಕೇತರ ನೌಕರರುಗಳಿಗೆ ವಿಶ್ವವಿದ್ಯಾನಿಲಯದಲ್ಲಿ "ಮಹಿಳಾ ಘಟಕ"ವನ್ನು ಸ್ಥಾಪಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                                        ಕುಲಪತಿಗಳು

| ಮಾ.ಸ.ನಿ. ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.02(m)/(03/26) |

## –: ಟಿಪ್ಪಣಿ :–

**ವಿಷಯ:** ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯಿದೆ, **2000** ಕಲಂ **58**ರ ಅಡಿಯಲ್ಲಿ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ **(RGUHS)** ಅಂತರ-ವಿಶ್ವವಿದ್ಯಾಲಯ ವರ್ಗಾವಣೆ ಕೋರಿ ಮನವಿ.

ಉಲ್ಲೇಖ:
1. ಶ್ರೀ ವಿನಯ್ ಕೆ.ಜಿ. ಸಹಾಯಕ ಕುಲಸಚಿವರು ಇವರ ಮನವಿ ದಿನಾಂಕ:11.03.2026
2. ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ:11.03.2026

*********

ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಸಹಾಯಕ ಕುಲಸಚಿವರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ವಿನಯ್ ಕೆ. ಜಿ. ಇವರು ತಮ್ಮ ವೈಯಕ್ತಿಕ ಮತ್ತು ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸುವ ದೃಷ್ಟಿಯಿಂದ ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯಕ್ಕೆ (RGUHS) ವರ್ಗಾವಣೆ ಮಾಡುವಂತೆ ಹಾಗೂ ದಾವಣಗೆರೆ ವಿಶ್ವವಿದ್ಯಾಲಯದ ತಮ್ಮ ಪ್ರಸ್ತುತ ಹುದ್ದೆಯನ್ನು ವರ್ಗಾಯಿಸದೆ (Without transfer of post), ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ, 2000 ರ ಸೆಕ್ಷನ್ 58(1) ರಿಂದ 58(4) ರ ಅಡಿಯಲ್ಲಿ ಅಂತರ ವಿಶ್ವವಿದ್ಯಾಲಯ ವರ್ಗಾವಣೆಗಾಗಿ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಕೌಟುಂಬಿಕ ಅನಿವಾರ್ಯತೆಗಳನ್ನು ಪರಿಗಣಿಸಿ, ಸದರಿ ಕಾಯಿದೆಯನ್ವಯ ಅಂತರ-ವಿಶ್ವವಿದ್ಯಾಲಯ ವರ್ಗಾವಣೆಗಾಗಿ ಅಗತ್ಯವಿರುವ ನಿರಾಕ್ಷೇಪಣಾ ಪತ್ರವನ್ನು (No Objection Certificate) ನೀಡುವ ಸಂಬಂಧ ದಿನಾಂಕಃ 12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸುತ್ತಿರುವ ಶ್ರೀ ವಿನಯ್ ಕೆ. ಜಿ. ಅವರು ಅಂತರ-ವಿಶ್ವವಿದ್ಯಾಲಯ ವರ್ಗಾವಣೆ ಕೋರಿ ಸಲ್ಲಿಸಿರುವ ಮನವಿಯನ್ನು ಸಿಂಡಿಕೇಟ್ ಸಭೆಯು ಕೂಲಂಕಷವಾಗಿ ಚರ್ಚಿಸಿ,ಈ ಕೆಳಗಿನಂತೆ ನಿರ್ಣಯಿಸಿತು:

ದಾವಣಗೆರೆ ವಿಶ್ವವಿದ್ಯಾಲಯದ ಪ್ರಸ್ತುತ ಹುದ್ದೆಯನ್ನು ವರ್ಗಾಯಿಸದೆ (Without transferof post) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯಿದೆ, 2000 ರ ಪ್ರಕರಣ 58(1) ರಿಂದ 58(4) ರ ಅಡಿಯಲ್ಲಿ ಅವರನ್ನು ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ (RGUHS) ಖಾಲಿ ಇರುವ ಸಹಾಯಕ ಕುಲಸಚಿವರ ಹುದ್ದೆಗೆ ಅಂತರ-ವಿಶ್ವವಿದ್ಯಾಲಯದಡಿ ಹುದ್ದೆ ರಹಿತವಾಗಿ ವರ್ಗಾವಣೆ ಹಾಗೂ ಶಿಫಾರಸ್ಸು ಮಾಡಲು ಮತ್ತು ಅಗತ್ಯವಿರುವ ನಿರಾಕ್ಷೇಪಣಾ ಪತ್ರ (NOC) ನೀಡಲು ಒಮ್ಮತದಿಂದ ತೀರ್ಮಾನಿಸಲಾಯಿತು.

ಸರ್ಕಾರದ ಮತ್ತು ಮಾನ್ಯ ಕುಲಪತಿಗಳ ಆದೇಶಕ್ಕೆ ಒಳಪಟ್ಟು, ಇವರನ್ನು ಸ್ವೀಕೃತ ವಿಶ್ವವಿದ್ಯಾಲಯದಲ್ಲಿ ಖಾಯಂ ಆಗಿ ವಿಲೀನಗೊಳಿಸಲು (Permanent Absorption) ಈ ವಿಶ್ವವಿದ್ಯಾಲಯದ ಯಾವುದೇ ಅಭ್ಯಂತರವಿರುವುದಿಲ್ಲ. ಈ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ರಾಜ್ಯ ಸರ್ಕಾರಕ್ಕೆ ಮತ್ತು ಗೌರವಾನ್ವಿತ ರಾಜ್ಯಪಾಲರ ಕಾರ್ಯಾಲಯಕ್ಕೆ ಪತ್ರಿಸಲು ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

ಕುಲಸಚಿವರು    ಕುಲಪತಿಗಳು

| ಶೈಕ್ಷಣಿಕ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(03/26) |

## –: ಟಿಪ್ಪಣಿ :–

ವಿಷಯ: ಶ್ರೀಮತಿ ರಮಾನಾಗರಾಜ ಎನ್. ಇವರು ನೀಡಿರುವ ಸ್ವರ್ಣ ಪದಕ ದೇಣಿಗೆಗೆ ತಮ್ಮ ತಾಯಿ ಹೆಸರನ್ನು ಸೇರ್ಪಡಿಸಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.02.2026

*********

ಶ್ರೀಮತಿ ರಮಾನಾಗರಾಜ ಎನ್, ಚಿತ್ರದುರ್ಗ ಇವರು ತಮ್ಮ ತಂದೆ ದಿವಗಂತ॥ ಹೆಚ್.ಎಲ್. ನಾರಾಯಣಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಹರವು ಪಾಂಡವಪುರ ಇವರ ಹೆಸರಿನಲ್ಲಿ 2013ರಲ್ಲಿ ಎಂ.ಎ. ಇಂಗ್ಲೀಷ್ ಪದವಿಯನ್ನು ಅತೀ ಹೆಚ್ಚು ಅಂಕ ಪಡೆದಿರುವ ಮಹಿಳಾ ವಿದ್ಯಾರ್ಥಿನಿಗೆ ಸ್ವರ್ಣ ಪದಕ ಪ್ರದಾನ ಮಾಡುವಂತೆ ದೇಣಿಗೆ ನೀಡಿರುತ್ತಾರೆ. ಇದುವರೆಗೂ ಇವರ ಹೆಸರಿನಲ್ಲಿ ಸ್ವರ್ಣಪದಕ ವಿತರಿಸಲಾಗುತ್ತಿತ್ತು. ಆದರೆ ಇನ್ನು ಮುಂದೆ ತಮ್ಮ ತಂದೆಯವರ ಹೆಸರಿನೊಂದಿಗೆ ತಮ್ಮ ತಾಯಿಯ ಹೆಸರನ್ನು ಸೇರ್ಪಡೆಗೊಳಿಸಿ 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸ್ವರ್ಣ ಪದಕ ಪ್ರದಾನ ಮಾಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಸ್ವರ್ಣ ಪದಕ ಪ್ರದಾನ ಮಾಡಲಾಗಿರುತ್ತದೆ. ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಈ ಹಿಂದೆ ಸ್ವರ್ಣ ಪದಕದ ವಿವರ | ಈಗ ಬದಲಾಯಿಸಬೇಕಾದ ಸ್ವರ್ಣ ಪದಕದ ವಿವರ |
|---|---|---|
| 01 | ದಿವಗಂತ॥ ಹೆಚ್.ಎಲ್. ನಾರಾಯಣಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಹರವು ಪಾಂಡವಪುರ. | ದಿವಗಂತ॥ ಶ್ರೀಮತಿ ಪುಟ್ಟಮ್ಮ ಎಸ್.ಎಸ್. ಮತ್ತು ದಿವಗಂತ॥ ಹೆಚ್.ಎಲ್. ನಾರಾಯಣಗೌಡ, ಮತ್ತು ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಹರವು ಪಾಂಡವಪುರ, ಮಂಡ್ಯ ಜಿಲ್ಲೆ. |

ಮಾನ್ಯ ಕುಲಪತಿಗಳ ಆದೇಶಾನುಸಾರ ಸದರಿ ವಿಷಯವನ್ನು ದಿನಾಂಕ:12.03.2026ರಂದು ನಡೆಯಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಿವಗಂತ॥ ಶ್ರೀಮತಿ ಪುಟ್ಟಮ್ಮ ಎಸ್.ಎಸ್. ಮತ್ತು ದಿವಗಂತ॥ ಹೆಚ್.ಎಲ್. ನಾರಾಯಣಗೌಡ, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಹರವು ಪಾಂಡವಪುರ, ಮಂಡ್ಯ ಜಿಲ್ಲೆ ಈ ಹೆಸರಿನೊಂದಿಗೆ ಸ್ವರ್ಣ ಪದಕವನ್ನು 13ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸ್ವರ್ಣ ಪದಕವನ್ನು ಪ್ರಧಾನ ಮಾಡಿರುವುದಕ್ಕೆ ಸಭೆಯ ಘಟನೋತ್ತರವಾಗಿ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಅಭಿವೃದ್ಧಿ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(03/26) |

## –: ಟಿಪ್ಪಣಿ :–

ವಿಷಯ: ಡಾ. ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ಸಂಶೋಧನಾ ವಿಭಾಗಕ್ಕೆ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ.

ಉಲ್ಲೇಖ: ಸಂಯೋಜನಾಧಿಕಾರಿಗಳು ಡಾ. ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಇವರ ಪತ್ರ ಸಂಖ್ಯೆ: ದಾ.ವಿ.ವಿ:ಡಾ:ಬಾಜರಾಅ & ಸಕೇ:2025–26/20 ದಿ:20.02.2026

*********

ಸಂಯೋಜನಾಧಿಕಾರಿಗಳು, ಡಾ. ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ – ಇವರು ವಿಭಾಗದಲ್ಲಿ ಸಲಹಾ ಸಮಿತಿ ಸಭೆ ಹಾಗೂ ಉಪ ಸಮಿತಿ ಸಭೆಗಳನ್ನು ನಡೆಸಲು ವಿಭಾಗಕ್ಕೆ ಅಗತ್ಯವಾಗಿ ಬೇಕಾಗಿರುವ ಕೆಳಕಂಡ ಪೀಠೋಪಕರಣಗಳನ್ನು ಒದಗಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ.

| ಕ್ರ.ಸಂ | ವಿವರ | ಸಂಖ್ಯೆ |
|---|---|---|
| 01 | Visitors Chairs | 12 |
| 02 | Computer Operator Chair | 01 |
| 03 | Glass Door Almera (Library Books) | 06 |
| 04 | Meeting Table | 02 |
| 05 | Pedestal Fan | 02 |

ಅಂದಾಜು ಮೊತ್ತ ರೂ.5.00ಲಕ್ಷಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಡಾ. ಬಾಬು ಜಗಜೀವನ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಕ್ಕೆ ಈ ಮೇಲ್ಕಂಡ ಪಟ್ಟಿಯಲ್ಲಿರುವ ಪೀಠೋಪಕರಣಗಳನ್ನು ಅಂದಾಜು ಮೊತ್ತ ರೂ.5.00 ಲಕ್ಷದ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ಸಭೆಯು ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.04(b)/(03/26) |

## –ঃ ಟಿಪ್ಪಣಿ ঃ–

**ವಿಷಯಃ** **ವಿಶ್ವವಿದ್ಯಾನಿಲಯದ ಮಹಿಳಾ ವಸತಿ ವಿದ್ಯಾರ್ಥಿ ನಿಲಯಗಳಿಗೆ 100 Study Chairs ಗಳನ್ನು ಖರೀದಿಸುವ ಬಗ್ಗೆ.**

ಉಲ್ಲೇಖ: ನಿಲಯಪಾಲರು, ಮಹಿಳಾ ವಸತಿ ನಿಲಯ ಇವರ ಪತ್ರಸಂಖ್ಯೆ: ದಾವಿವಿ:ಮವನಿ:256:2025-2 ದಿನಾಂಕ:11.09.2025

*********

ವಿಶ್ವವಿದ್ಯಾನಿಲಯದ ಮಹಿಳಾ ವಸತಿ ವಿದ್ಯಾರ್ಥಿ ನಿಲಯಗಳಿಗೆ ನಿಲಯಪಾಲಕರು ಮನವಿ ಪತ್ರದಲ್ಲಿ ಒಟ್ಟು 3 ಮಹಿಳಾ ವಸತಿ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಕೊಠಡಿಗಳಿಗೆ 100 Study Chairs ಗಳನ್ನು ಖರೀದಿಸಿ ಒದಗಿಸಬೇಕೆಂದು ಮನವಿ ಸಲ್ಲಿಸಿರುತ್ತಾರೆ.

ಅಂದಾಜು ಮೊತ್ತ ರೂ.5.00ಲಕ್ಷಗಳ ಮಿತಿಯೊಳಗೆ ನಿಯಮಾನುಸಾರ ದರಪಟ್ಟಿ ಮೂಲಕ ಖರೀದಿಸಲು ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

- **ಡಾ. ಜಿ.ಕೆ. ಪ್ರೇಮ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ,** ಇವರು – ವಿಶ್ವವಿದ್ಯಾನಿಲಯದ ಮಹಿಳಾ ವಸತಿ ನಿಲಯಗಳನ್ನು ಶುಚಿಗೊಳಿಸಲು ಬಣ್ಣ ಲೇಪನ ಮಾಡಿಸುವಂತೆ ಹಾಗೂ ಕೆಲವು ಸ್ವಿಚ್‌ಬೋರ್ಡ್‌ಗಳು ಕಾರ್ಯನಿರ್ವಹಿಸದೇ ಇರುವುದರಿಂದ ಹೊಸದಾಗಿ ಸ್ವಿಚ್‌ಬೋರ್ಡ್ ಅಳವಡಿಸುವ ಕುರಿತು ಅಭಿಪ್ರಾಯ ವ್ಯಕ್ತಪಡಿಸಿದರು ಹಾಗೂ ನಿಲಯಪಾಲರುಗಳ ಸಭೆ ನಡೆಸಿ ವಿಶ್ವವಿದ್ಯಾನಿಲಯದ ವಸತಿ ನಿಲಯಗಳ ಕುಂದು ಕೊರತೆಗಳ ಸಭೆ ನಡೆಸಿ, ಕ್ರಮವಹಿಸುವಂತೆ ತಿಳಿಸಿದರು.
- **ಶ್ರೀ ತಿಪ್ಪೇಸ್ವಾಮಿ, ಮಾನ್ಯ ಸಿಂಡಿಕೇಟ್ ಸದಸ್ಯರು, ದಾವಣಗೆರೆ ವಿಶ್ವವಿದ್ಯಾನಿಲಯ** – ಇವರು ವಸತಿ ನಿಲಯಗಳಲ್ಲಿ ನೀಡುತ್ತಿರುವ ಊಟದ ಗುಣಮಟ್ಟವನ್ನು ಹೆಚ್ಚಿಸುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

**:: ನಿರ್ಣಯ ::**

ಪರೀಕ್ಷಾಂಗ ವಿಭಾಗಕ್ಕೆ ಖರೀದಿಸಲಾಗಿರುವ 100 Plastic Chairs ಗಳನ್ನು ವಿಶ್ವವಿದ್ಯಾನಿಲಯದ ಮಹಿಳಾ ವಸತಿ ವಿದ್ಯಾರ್ಥಿ ನಿಲಯಗಳಿಗೆ ಹಸ್ತಾಂತರಿಸಲು ಸಭೆಯು ನಿರ್ಣಯಿಸಿರುವುದರಿಂದ ಪರೀಕ್ಷಾಂಗ ವಿಭಾಗದವರಿಗೆ ಈ ಕುರಿತು ಪತ್ರಿಸಿ ಕ್ರಮವಹಿಸುವಂತೆ ನಿರ್ಣಯಿಸಲಾಯಿತು.

ಕುಲಸಚಿವರು ಕುಲಪತಿಗಳು

| ಅಭಿವೃದ್ಧಿ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.04(c)/(03/26) |

## –: ಟಿಪ್ಪಣಿ :–

ವಿಷಯಃ ವಿಶ್ವವಿದ್ಯಾನಿಲಯದಲ್ಲಿರುವ ವೈಜ್ಞಾನಿಕ ಉಪಕರಣ ಕೇಂದ್ರದಲ್ಲಿರುವ (University Scientific Instrumentation Centre) ಉಪಕರಣಗಳಿಗೆ AMC ವಾರ್ಷಿಕ ನಿರ್ವಹಣೆ ಕುರಿತು.

*********

ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ (University Scientific Instrumentation Centre) ಕೇಂದ್ರಲ್ಲಿರುವ ಈ ಕೆಳಕಂಡಂತೆ ಉಪಕರಣಗಳನ್ನು ಖರೀದಿಸಿದ್ದು ಅವುಗಳ ನಿರ್ವಹಣೆ ಅವಧಿ ಮುಗಿದಿದ್ದು ಇಂತಹ 3 ಉಪಕರಣಗಳಿಗೆ ವಾರ್ಷಿಕ ನಿರ್ವಹಣೆ (AMC) ನೀಡಲು ದರಪಟ್ಟಿ ಪಡೆಯಲಾಗಿದ್ದು ಅವುಗಳಿಗೆ

| Sl.No | Name Of The Instrument | Year Of Purchase | Make | Supplied Agency | Cost | 1 Year AMC Amount + 18% GST |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | Electrochemical WorkStation | 2021 | C-H | M/s Sinsil International | 18,36,505=00 | 59,000=00 |
| 2 | FTIR Spectrophotometer with universal sampling module | 2021 | Bruker India | M/s LAB India (INKARP) | 23,60,000=00 | 99,120=00 |
| 3 | Fluorescence spectrophotometer | 2021 | Perkin Elmer | Ms Basil Biosolutions | 37,65,000=00 | 81,771=00 |
| | | | | | Total | 2,39,891=00 |

ಒಟ್ಟು ರೂ.2,39,891=00 ಗಳಾಗುತ್ತದೆ 3 ಸಂಸ್ಥೆಯವರು ಒಪ್ಪಿಗೆ ನೀಡಿರುತ್ತಾರೆ. ಆದ್ದರಿಂದ, ಸಂಖ್ಯೆ:05 ರಲ್ಲಿರುವ 3 ಸಂಸ್ಥೆಯವರೊಂದಿಗೆ ವಾರ್ಷಿಕ ನಿರ್ವಹಣೆ ಮಾಡಲು ಒಂದು ವರ್ಷದ ಅವಧಿಗೆ (AMC) ನೀಡುವ ಬಗ್ಗೆ ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ವೈಜ್ಞಾನಿಕ ಉಪಕರಣ (University Scientific Instrumentation Centre) ಕೇಂದ್ರಲ್ಲಿರುವ ಈ ಮೇಲ್ಕಂಡ ಉಪಕರಣಗಳಿಗೆ ವಾರ್ಷಿಕ ನಿರ್ವಹಣೆ (AMC) ನೀಡಲು 3 ಸಂಸ್ಥೆಯವರು ಒಪ್ಪಿಗೆ ನೀಡಿರುತ್ತಾರೆ. ಆದ್ದರಿಂದ, ಸಂಖ್ಯೆ:05 ರಲ್ಲಿರುವ 3 ಸಂಸ್ಥೆಯವರೊಂದಿಗೆ ವಾರ್ಷಿಕ ನಿರ್ವಹಣೆ ಮಾಡಲು ಒಂದು ವರ್ಷದ ಅವಧಿಗೆ (AMC) ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಅಭಿವೃದ್ಧಿ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.04(d)/(03/26) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾಲಯದಲ್ಲಿ "ಡಿಜಿಟಲ್ ಶಿಕ್ಷಣ ವ್ಯವಸ್ಥೆಗಳ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನ" (Design, Development, and Implementation of Digital Education Systems) ಗೊಳಿಸುವ ಪ್ರಸ್ತಾವನೆ ಕುರಿತು**

*********

ದಾವಣಗೆರೆ ವಿಶ್ವವಿದ್ಯಾನಿಲಯವು ತನ್ನ ಆವರಣದ ಸ್ನಾತಕೋತ್ತರ ವಿಭಾಗಗಳು ಮತ್ತು ಸಂಯೋಜಿತ ಪದವಿ ಕಾಲೇಜುಗಳ ಮೂಲಕ ವಿವಿಧ ಸ್ನಾತಕ, ಸ್ನಾತಕೋತ್ತರ ಪದವಿ ಮತ್ತು ಪಿ.ಜಿ.ಡಿಪ್ಲೋಮೊ ಕೋರ್ಸ್‌ಗಳನ್ನು ಪ್ರಸ್ತುತ ಆಫ್‌ಲೈನ್ ಮೂಲಕ ಒದಗಿಸುತ್ತಿದೆ. ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಗಳು ಮತ್ತು ಡಿಜಿಟಲ್ ಶಿಕ್ಷಣದ ಅಗತ್ಯಕ್ಕೆ ಹೊಂದಿಕೊಳ್ಳಲು, ವಿಶ್ವವಿದ್ಯಾನಿಲಯವು ಡಿಜಿಟಲ್ ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿಪಡಿಸಿಕೊಂಡು ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಹಾಗೂ ಸಂಶೋಧನೆಗೆ ಸಹಕಾರಿಯಾಗಲಿದೆ.

ಮುಂದುವರೆದು, NGENIOPSS ಪ್ರೈವೇಟ್ ಲಿಮಿಟೆಡ್ ಸಂಸ್ಥೆ ಇವರು ಡಿಜಿಟಲ್ ಶಿಕ್ಷಣ ವ್ಯವಸ್ಥೆಗಳ ವಿನ್ಯಾಸ, ಅಭಿವೃದ್ಧಿ ಮತ್ತು ಅನುಷ್ಠಾನಕ್ಕಾಗಿ ಸಂಯೋಜಿತ ಕ್ಯಾಂಪಸ್ ಮೂಲಸೌಕರ್ಯ ಅಭಿವೃದ್ಧಿ" ಎಂಬ ಶೀರ್ಷಿಕೆಯಡಿ ವಿಶ್ವವಿದ್ಯಾನಿಲಯವು ಡಿಜಿಟಲ್ ಶಿಕ್ಷಣದ ಅಗತ್ಯಕ್ಕೆ ಹೊಂದಿಕೊಳ್ಳಲು ಸಂಪೂರ್ಣವಾಗಿ ನಿರ್ವಹಿಸಲ್ಪಡುವ ಮತ್ತು ವಿಸ್ತರಿಸಬಹುದಾದ 'ಇ-ಲರ್ನಿಂಗ್ ಮ್ಯಾನೇಜ್ಮೆಂಟ್ ಸಿಸ್ಟಮ್' (LMS) ಮತ್ತು ಇ-ಕಂಟೆಂಟ್ ಅಭಿವೃದ್ಧಿಯನ್ನು ಹಾಗೂ Incubation Centre, Date Centre ಗಳನ್ನು ರಚನೆ ಮಾಡಿ ಜಾರಿಗೊಳಿಸಲು ಸಹಕರಿಸುವ ವ್ಯವಸ್ಥೆಯನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

NGENIOPSS ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಸದರಿ ಡಿಜಿಟಲ್ ವ್ಯವಸ್ಥೆಯ ಮೂಲಕ ಆನ್ಲೈನ್ ಕೋರ್ಸ್‌ಗಳ ಪರಿಚಯಿಸಲು (PDF, Video, PPT), ಸದರಿ ಕೋರ್ಸ್‌ಗಳಿಗೆ ಸಂಬಂಧಿಸಿದ ವಿಶ್ವವಿದ್ಯಾಲಯದ ಪಠ್ಯಕ್ರಮದಂತೆ ಇ-ಕಂಟೆಂಟ್ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳ ಲಾಗಿನ್ ವಿವರಗಳೊಂದಿಗೆ ವರ್ಚುವಲ್ ಕ್ಯಾಂಪಸ್ ಸ್ಥಾಪಿಸಿ, ಕೋರ್ಸ್‌ಗಳ ಪ್ರವೇಶಾತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಲಿಂಕ್ ಮಾಡುವುದರ ಜೊತೆಗೆ ಶುಲ್ಕ ನಿರ್ವಹಣೆಗಾಗಿ ಬೇಕಾದ ಆನ್ಲೈನ್ ಪೇಮೆಂಟ್ ಗೇಟ್ವೆ ಅನುಷ್ಠಾನಗೊಳಿಸಿ, ಆನ್ಲೈನ್/ಆಫ್‌ಲೈನ್ ಪರೀಕ್ಷೆಗಳು, ಅಸ್ಸೈನ್ಮೆಂಟ್ಗಳು ಮತ್ತು ವಿಶ್ವವಿದ್ಯಾಲಯದ ಮ್ಯಾನೇಜ್ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ (MIS) ನಿರ್ಮಿಸುವುದಾಗಿ ತಿಳಿಸಿರುತ್ತಾರೆ. ವಿದ್ಯಾರ್ಥಿಗಳ ಕುಂದುಕೊರತೆ ನಿವಾರಣೆಗಾಗಿ ಸಹಾಯವಾಣಿ ಕೇಂದ್ರದ ಸ್ಥಾಪನೆ ಹಾಗೂ ಡಿಜಿಟಲ್ ಮತ್ತು ಸಾಮಾಜಿಕ ಮಾಧ್ಯಮಗಳ ಮೂಲಕ ಪ್ರಚಾರ ಕಾರ್ಯದೊಂದಿಗೆ, ಸಂಪೂರ್ಣ ಡಿಜಿಟಲ್ ವ್ಯವಸ್ಥೆಯನ್ನು ನಿರ್ವಹಿಸಲು ಅಗತ್ಯವಿರುವ ಹಣಕಾಸಿನ ಹಾಗೂ ತಾಂತ್ರಿಕ ಸಿಬ್ಬಂದಿಯನ್ನು ಸಂಸ್ಥೆಯೇ ಒದಗಿಸುವುದಾಗಿ ತಮ್ಮ ಪ್ರಾಸ್ತಾವನೆಯಲ್ಲಿ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ NGENIOPSS ಪ್ರೈವೇಟ್ ಲಿಮಿಟೆಡ್ ಸಲ್ಲಿಸಿರುವ ಪ್ರಸ್ತಾವನೆಯ ವಿಷಯವನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಂಡು ಅನುಷ್ಠಾನಗೊಳಿಸುವ ಕುರಿತು ದಿನಾಂಕ:12.03.2026ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ಮೇಲ್ಕಂಡ ಸದರಿ ಯೋಜನೆಯ ಕುರಿತು ಕೂಲಂಕುಶವಾಗಿ ಚರ್ಚಿಸಿದ ಬಳಿಕ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಸಹಕಾರಿಯಾಗುವುದರಿಂದ ಮೇಲ್ಕಂಡಂತೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಭೆಯು ಅನುಮೋದನೆ ನೀಡಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 27 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(03/26) |

## –: ಟಿಪ್ಪಣಿ :–

**ವಿಷಯ:** **ಕೆ.ಎಸ್.ಎಸ್. ಎಂ.ಇಡಿ., ಕಾಲೇಜು, ದಾವಣಗೆರೆ – ಇವರು ಮುಂದುವರಿಕೆ ಸಂಯೋಜನಾ ಬಾಕಿ ಶುಲ್ಕ ವಿನಾಯಿತಿ ನೀಡುವಂತೆ ಕೋರಿರುವ ಕುರಿತು.**

ಉಲ್ಲೇಖ:
1. ಪ್ರಾಂಶುಪಾಲರು, ಕೆ.ಎಸ್.ಎಸ್. ಎಂಇಡಿ. ಕಾಲೇಜು, ದಾ. ಇವರ ಪತ್ರ ಸಂ: ದಿನಾಂಕ:12.07.2025
2. ಸರ್ಕಾರ ಪತ್ರ ಸಂ:ಇಡಿ 167 ಯುಎನ್ಇ 2018 ಬೆಂಗಳೂರು, ದಿನಾಂಕ:26.07.2018
3. ಸರ್ಕಾರದ ಪತ್ರ ಸಂ:ಇಡಿ 189 ಯುಪಿಸಿ 2016 ಬೆಂಗಳೂರು, ದಿನಾಂಕ:20.02.2017

*********

ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಕಾಲೇಜಾದ – ಕೆ.ಎಸ್.ಎಸ್. ಎಂ.ಇಡಿ. ಕಾಲೇಜ್, ದಾವಣಗೆರೆ ಇವರು 2017–18 ರಿಂದ 2022–23ನೇ ಶೈಕ್ಷಣಿಕ ಅವಧಿಯಲ್ಲಿನ ಸಂಯೋಜನಾ ಶುಲ್ಕದ ಬಾಬ್ತು **ರೂ.5,72,000/–**ಗಳನ್ನು ಪಾವತಿಸಲು ಸಾಧ್ಯವಾಗುವುದಿಲ್ಲವೆಂದು, ತಮ್ಮ ಸಂಸ್ಥೆಯು ಪರಿಶಿಷ್ಟ ಜಾತಿ ಆಡಳಿತ ಮಂಡಳಿಗೆ ಸೇರಿದ್ದು, ಅಲ್ಲಿನ ಬಹುಪಾಲು ವಿದ್ಯಾರ್ಥಿಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದು, ಸದರಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಹಾಗೂ ಉಲ್ಲೇಖ (2) ಮತ್ತು (3)ರ ಸರ್ಕಾರದ ಪತ್ರವನ್ನು ಉಲ್ಲೇಖಿಸಿ ಶ್ರೀ ಡಿ. ದೇವರಾಜ ಅರಸ್ ಕಾಲೇಜು, ದಾವಣಗೆರೆ – ಸಂಯೋಜನಾ ಶುಲ್ಕ ಪಾವತಿಯಲ್ಲಿ ವಿನಾಯಿತಿ ನೀಡಿರುವಂತೆ ತಮ್ಮ ಕಾಲೇಜಿಗೂ ಬಾಕಿ ಇರುವ ಸಂಯೋಜನಾ ಶುಲ್ಕಕ್ಕೆ ವಿನಾಯಿತಿ ಕೋರಿರುತ್ತಾರೆ.

**ಶ್ರೀ ಡಿ. ದೇವರಾಜ ಅರಸ್ ಕಾಲೇಜು, ದಾವಣಗೆರೆ ಕಾಲೇಜನ್ನು, ವೇತನಾನುದಾನಕ್ಕೆ ಒಳಪಡಿಸುವ ನಿಟ್ಟನಲ್ಲಿ ಕಾಲೇಜಿಗೆ ಸರ್ಕಾರದ ನಿರ್ದೇಶನದ ಮೇರೆಗೆ ಹಾಗೂ ಸರ್ಕಾರವು ನೀಡಿರುವ ಷರತ್ತಿಗೊಳಪಟ್ಟು ವಿನಾಯಿತಿ ನೀಡಲಾಗಿರುತ್ತದೆ.** ಕೆ.ಎಸ್.ಎಸ್. ಕಾಲೇಜು, ದಾವಣಗೆರೆ ಇವರು 2016–17 ರಿಂದ 2022–23 ಸಾಲಿನವರೆಗೆ ಎಂ.ಇಡಿ. ಪದವಿಯ ಮುಂದುವರಿಕೆ ಸಂಯೋಜನೆಗೆ ನಿಯಮಾನುಸಾರ ವಿಶ್ವವಿದ್ಯಾನಿಲಯಕ್ಕೆ ಅರ್ಜಿ ಸಲ್ಲಿಸಿರುವುದಿಲ್ಲ. UGC (Affiliation of Colleges by Universities) Regulation, 2009ರ ಪ್ಯಾರ ಸಂಖ್ಯೆ (8) ಮತ್ತು ಉಪ ಪ್ಯಾರ (8.2)ರಲ್ಲಿ ತಿಳಿಸಿರುವಂತೆ, "ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಇಲ್ಲದೇ ಯಾವುದೇ ಒಂದು ಸಂಯೋಜಿತ ಕಾಲೇಜಿನ ಪ್ರಕ್ರಿಯೆಗಳನ್ನು ಸ್ಥಗಿತಗೊಳಿಸಿದ್ದಲ್ಲಿ/ಕಾಲೇಜಿನ ಸ್ಥಳ ಬದಲಾವಣೆ/ಯಾವುದೇ ಸೊಸೈಟಿಗಳಿಗೆ ವರ್ಗಾವಣೆ ಮಾಡಿದ್ದ ಪ್ರಸಂಗಗಳಲ್ಲಿ ವಿಶ್ವವಿದ್ಯಾನಿಲಯವು ನೀಡಿದ್ದ ಸಂಯೋಜನೆ ಸ್ವತಃ (Automatically) ರದ್ದಾಗುತ್ತದೆ. ನಂತರದ ದಿನಗಳಲ್ಲಿ ಅಂತಹ ಕಾಲೇಜಿನವರು ಸಂಯೋಜನೆಗೆ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ನವೀನ ಸಂಯೋಜನೆಗೆ ಪರಿಗಣಿಸಬೇಕಾಗಿರುತ್ತದೆ". ಮುಂದುವರೆದು, 2023–24ನೇ ಶೈಕ್ಷಣಿಕ ಸಾಲಿನಲ್ಲಿ ಸದರಿ ಕಾಲೇಜಿಗೆ ಮುಂದುವರಿಕೆ ಸಂಯೋಜನೆ ನೀಡಲಾಗಿರುತ್ತದೆ. ಉಲ್ಲೇಖ (4)ರ ದಾವಿವಿ ಪತ್ರದಲ್ಲಿ ಈಗಾಗಲೇ 5,72,000/–ಗಳ ಬಾಕಿ ಸಂಯೋಜನಾ ಶುಲ್ಕವನ್ನು ಪಾವತಿಸುವಂತೆ ಸದರಿ ಕಾಲೇಜಿಗೆ ಪತ್ರಿಸಲಾಗಿತ್ತು.

**ಮುಂದುವರೆದಿದೆ...**

ಕುಲಸಚಿವರು                ಕುಲಪತಿಗಳು

2016–17 ರಿಂದ 2022–23 ನೇ ಶೈಕ್ಷಣಿಕ ಸಾಲಿನಲ್ಲಿ ಕೆ.ಎಸ್.ಎಸ್. ಎಂ.ಇಡಿ. ಕಾಲೇಜ್, ದಾವಣಗೆರೆ – ಇಲ್ಲಿ ಸ್ನಾತಕೋತ್ತರ ಎಂ.ಇಡಿ. ಪದವಿಗೆ ಯಾವುದೇ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುವುದಿಲ್ಲ ಹಾಗೂ ಸಂಯೋಜನಾ ಆದೇಶಗಳನ್ನು ನೀಡಲಾಗಿರುವುದಿಲ್ಲ. ಆದುದರಿಂದ, ಸದರಿ ಕಾಲೇಜಿನ ಬಾಕಿ ಶುಲ್ಕ ರೂ.5,72,000/–ಗಳ ಪಾವತಿಗೆ ಸಂಬಂಧಿಸಿದಂತೆ ದಿನಾಂಕ:12.03.2026ರಂದು ಜರುಗಲಿರುವ ಸಿಂಡಿಕೇಟ್ ಸಭೆಯ ಚರ್ಚೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದ ವ್ಯಾಪ್ತಿಯ – ಕೆ.ಎಸ್.ಎಸ್. ಎಂ.ಇಡಿ. ಕಾಲೇಜ್, ದಾವಣಗೆರೆ ಇವರು 2017–18 ರಿಂದ 2022–23ನೇ ಶೈಕ್ಷಣಿಕ ಅವಧಿಗೆ ಸಂಬಂಧಿಸಿದಂತೆ ಪಾವತಿಸದೇ ಇರುವ ಸಂಯೋಜನಾ ಶುಲ್ಕದ ಬಾಬ್ತು **ರೂ.5,72,000/**–ಗಳನ್ನು ಸದರಿ ಕಾಲೇಜಿಗೆ ನಿಯಮಾನುಸಾರ ವಿನಾಯಿತಿ ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 28 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(03/26) |

# –: ಟಿಪ್ಪಣಿ :–

**ವಿಷಯ:** **ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ದಾವಣಗೆರೆ – ಇವರು 2025–26ನೇ ಶೈಕ್ಷಣಿಕ ಸಾಲಿನಿಂದ ಎಂ.ಬಿ.ಎ. ಸ್ನಾತಕೋತ್ತರ ಪದವಿಗೆ ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ ಎಂಬ ಹೆಸರಿನಲ್ಲಿ ಎಐಸಿಟಿಇ ಅನುಮೋದನೆ ಪಡೆದಿರುವ ಕುರಿತು.**

ಉಲ್ಲೇಖ:
1. ಸರ್ಕಾರದ ಪತ್ರ ಸಂ: ಇಡಿ 237 ಯುಎನ್‌ಇ 2025 ಬೆಂಗಳೂರು, ದಿನಾಂಕ:08.08.2025
2. ಸ್ಥಳೀಯ ತಪಾಸಣೆ ಸಮಿತಿ ರಚನೆ ದಿನಾಂಕ:14.08.2025
3. ದಾವಿವಿ ಸರ್ಕಾರಕ್ಕೆ ಬರೆದ ಪತ್ರ ಸಂ:ದಾವಿವಿ/ಸಿಡಿಸಿ/ಆರ್‌ಜಿ–24/2025–26/2120 ದಿ:14.08.2025

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ದಾವಣಗೆರೆ – ಇವರು ಇದುವರೆಗೂ ಸ್ನಾತಕ ಬಿ.ಕಾಂ., ಬಿ.ಸಿ.ಎ. ಹಾಗೂ ಸ್ನಾತಕೋತ್ತರ ಎಂ.ಕಾಂ. ಪದವಿಗಳಿಗೆ ಮುಂದುವರಿಕೆ ಸಂಯೋಜನೆಗೆ ಅರ್ಜಿ ಸಲ್ಲಿಸಿ ಅನುಮೋದನೆ ಪಡೆದಿರುತ್ತದೆ.

- ಪ್ರಸ್ತುತ 2025–26ನೇ ಸಾಲಿನಿಂದ ಸ್ನಾತಕೋತ್ತರ ಎಂ.ಬಿ.ಎ. ಪದವಿಯನ್ನು ಪ್ರಾರಂಭಿಸಲು ಅನುಮತಿ ಕೋರಿ **ದಿನಾಂಕ:19.06.2025ರಂದು ಆಫ್‌ಲೈನ್ ಮೂಲಕ** ಅರ್ಜಿ ಸಲ್ಲಿಸಿರುತ್ತಾರೆ. ಉಲ್ಲೇಖಿತ (1)ರ ಸರ್ಕಾರದ ನಿರ್ದೇಶನದನುಸಾರ, ಪ್ರಸ್ತುತ ಅವಧಿಗೆ ಸದರಿ ಕಾಲೇಜಿನ ಪ್ರಸ್ತಾವನೆಯನ್ನು **"ವಿಶೇಷ ಪ್ರಕರಣವೆಂದು ಪರಿಗಣಿಸಿ"** ವಿಶ್ವವಿದ್ಯಾನಿಲಯದ ಹಂತದಲ್ಲಿಯೇ ಕುಲಸಚಿವರ ಮತ್ತು ಸಿಡಿಸಿ ವಿಭಾಗದ UUCMS ಲಾಗಿನ್‌ನಲ್ಲಿ Add Government Order ಅಡಿಯಲ್ಲಿ ಸರ್ಕಾರದ ಅನುಮತಿ ಪತ್ರವನ್ನು ಅಪ್‌ಲೋಡ್ ಮಾಡಿ ಸದರಿ **ಎಂ.ಬಿ.ಎ.** ಕೋರ್ಸ್‌ನ್ನು ದಿನಾಂಕ:19.08.2025ರಂದು ತಂತ್ರಾಂಶದಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.
- ಆದರೆ UUCMS ತಂತ್ರಾಂಶದಲ್ಲಿ ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ – ಎಂಬ ಹೆಸರಿನಲ್ಲಿ ಕಾಲೇಜು ನೋಂದಣಿಯಾಗಿರುವುದಿಲ್ಲ. ಸದರಿ ಕಾಲೇಜಿನ ಹೆಸರಿನಲ್ಲಿ UUCMS Login Credentials ಅನ್ನು ಪಡೆದಿರುವುದಿಲ್ಲ.
- ಸದರಿ ಕಾಲೇಜಿನ ಆಡಳಿತ ಮಂಡಳಿಯವರು ಎಂ.ಬಿ.ಎ. ಸ್ನಾತಕೋತ್ತರ ಪದವಿಯ ಎಐಸಿಟಿಇ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ – ಎಂಬ ಹೆಸರಿನಲ್ಲಿ ಪಡೆದಿದ್ದು, ಅದೇ ಹೆಸರಿನಲ್ಲಿ ಸರ್ಕಾರದ ಅನುಮೋದನೆಯನ್ನು ಪಡೆದು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಪತ್ರದನುಸಾರ – ಸಂಯೋಜನಾ ಆದೇಶವನ್ನು ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ ಎಂಬ ಹೆಸರಿನಲ್ಲಿಯೇ ನೀಡಲಾಗಿರುತ್ತದೆ.

**ಮುಂದುವರೆದಿದೆ...**

ಕುಲಸಚಿವರು      ಕುಲಪತಿಗಳು

* ಯುಯುಸಿಎಂಎಸ್ ತಂತ್ರಾಂಶದಲ್ಲಿ ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್, ದಾವಣಗೆರೆ – ಕಾಲೇಜು ನೋಂದಣಿಯಾಗದಿರುವ ಕಾರಣಕ್ಕೆ, ಕಾಲೇಜಿನಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ನೋಂದಣಿ, ದಾಖಲಾತಿ ಅನುಮೋದನೆ ಹಾಗೂ ಅಂಕಪಟ್ಟಿಗಳ ಮುದ್ರಣ ಇತ್ಯಾದಿ., ಪ್ರಕ್ರಿಯೆಗಳು ಯುಯುಸಿಎಂಎಸ್ ತಂತ್ರಾಂಶದಲ್ಲಿ ನಡೆಸಲು ಸಾಧ್ಯವಿರುವುದಿಲ್ಲ.

* ತತ್ಸಂಬಂಧ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಬಿ.ಎ. ಸ್ನಾತಕೋತ್ತರ ಪದವಿಗೆ ಎಐಸಿಟಿಇ ಪಡೆದ ಅನುಮೋದನೆ ಇತರೇ ದಾಖಲಾತಿಗಳನ್ನು ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ದಾವಣಗೆರೆ – (1) ಹೆಸರಿಗೆ ತಿದ್ದುಪಡಿ ಮಾಡಿಸಿಕೊಳ್ಳುವಂತೆ ಷರತ್ತು ವಿಧಿಸುವಂತೆ (2) 2025–26ನೇ ಸಾಲಿನ ಸ್ನಾತಕೋತ್ತರ ಎಂ.ಬಿ.ಎ. ಪದವಿಯ ಸಂಯೋಜನಾ ಆದೇಶವನ್ನು ಪರಿಷ್ಕರಿಸಿ, ಪ್ರವೇಶಾತಿ ಅನುಮೋದನೆ ನೀಡುವ ಕುರಿತು ಚರ್ಚಿಸುವ ಬಗ್ಗೆ ಮತ್ತು (3) ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು – ಇವರಿಗೆ ಸದರಿ ಕಾಲೇಜಿನ ಹೆಸರಿನ ಬದಲಾವಣೆಯಾಗಿರುವ ಬಗ್ಗೆ ಪತ್ರಿಸುವ ಕುರಿತು ದಿನಾಂಕ:12.03.2026 ರಂದು ಜರುಗಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಸೂಕ್ತ ಕ್ರಮಕ್ಕಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ & ಸ್ಟಡೀಸ್, ದಾವಣಗೆರೆ ಇವರು 2025–26ನೇ ಶೈಕ್ಷಣಿಕ ಸಾಲಿನಲ್ಲಿ ಎಂ.ಬಿ.ಎ. ಸ್ನಾತಕೋತ್ತರ ಪದವಿಗೆ ಎಐಸಿಟಿಇ ಯಿಂದ ಪಡೆದ ಅನುಮೋದನೆ ಇತರೇ ದಾಖಲಾತಿಗಳನ್ನು ಆರ್.ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ & ಮ್ಯಾನೇಜ್‌ಮೆಂಟ್, ದಾವಣಗೆರೆ – (1) ಹೆಸರಿಗೆ ತಿದ್ದುಪಡಿ ಮಾಡಿಸಿಕೊಳ್ಳುವಂತೆ ಷರತ್ತು ವಿಧಿಸುವಂತೆ (2) 2025–26ನೇ ಸಾಲಿನ ಸ್ನಾತಕೋತ್ತರ ಎಂ.ಬಿ.ಎ. ಪದವಿಯ ಸಂಯೋಜನಾ ಆದೇಶವನ್ನು ಪರಿಷ್ಕರಿಸಿ, ಪ್ರವೇಶಾತಿ ಅನುಮೋದನೆ ನೀಡುವ ಬಗ್ಗೆ ಮತ್ತು (3) ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರಿಗೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 29 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(03/26) |

## –: ಟಿಪ್ಪಣಿ :–

**ವಿಷಯಃ 2026–27ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸಂಯೋಜನಾ ಕಾರ್ಯಕ್ಕೆ ನಿಯೋಜಿಸಲಾಗಿದ್ದ ಅಧ್ಯಕ್ಷರು/ ಸದಸ್ಯರುಗಳಿಗೆ ದಿನಭತ್ಯೆ ಮೊತ್ತವನ್ನು ಪಾವತಿಸಲು ಅನುಮೋದನೆ ನೀಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಸ್ನಾತಕೋತ್ತರ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯಗಳಿಗೆ ಸಂಬಂಧಿಸಿದಂತೆ, ನಡೆಸಲಾಗುವ ತಪಾಸಣಾ ಕಾರ್ಯದ ವಿವಿಧ ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗಿದ್ದ ಅಧ್ಯಕ್ಷರು/ಸದಸ್ಯರುಗಳಿಗೆ ಹಾಗೂ ಬಾಹ್ಯ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ನೀಡಲಾಗುವ ದಿನಭತ್ಯೆ **ರೂ.2,17,440/–** ಗಳನ್ನು ಪಾವತಿಸಬೇಕಾಗಿರುತ್ತದೆ.

| ಕ್ರ.ಸಂ. | ಸಮಿತಿಯಲ್ಲಿನ ಒಟ್ಟು ಅಧ್ಯಕ್ಷರು/ ಸದಸ್ಯರುಗಳ ವಿವರ | ಪಾವತಿಸಲಾಗುವ ಭತ್ಯೆ (ಪ್ರತಿಯೊಬ್ಬರಿಗೆ) | ಮೊತ್ತ |
|---|---|---|---|
| 01 | ಅಧ್ಯಕ್ಷರು – 41 | 1800/– | 73,800 |
| 02 | ಸದಸ್ಯರು – 80 | 1500/– | 120000 |
| 03 | ಬಾಹ್ಯ ಸದಸ್ಯರು – 05<br>(ಕವಿಧಾ–01, ಕುವಿವಿ–02, ವಿಎಸ್‌ಕೆವಿ–02) | – | 23,640 |
| | ಒಟ್ಟು | | **2,17,440** |

ಈ ಕುರಿತು ದಿನಾಂಕ:12.03.2026ರಂದು ಜರುಗಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಸ್ನಾತಕೋತ್ತರ ಪದವಿ ಕಾಲೇಜುಗಳ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಕಾರ್ಯಗಳಿಗೆ ಸಂಬಂಧಿಸಿದಂತೆ, ನಡೆಸಲಾಗುವ ತಪಾಸಣಾ ಕಾರ್ಯದ ವಿವಿಧ ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗಿದ್ದ ಅಧ್ಯಕ್ಷರು/ಸದಸ್ಯರುಗಳಿಗೆ ಹಾಗೂ ಬಾಹ್ಯ ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ನೀಡಲಾಗುವ ದಿನಭತ್ಯೆ **ರೂ.2,17,440/–** ಗಳನ್ನು ಸಂಬಂಧಿಸಿದವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　　　ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 30 | |
|---|---|
| ವಿಷಯ ಸಂಖ್ಯೆ: | ಸಿಂ.05(d)/(03/26) |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯ ವ್ಯಾಪ್ತಿಯ ವಿವಿಧ ಕಾಲೇಜುಗಳಿಂದ ಹೆಚ್ಚುವರಿ ಪಾವತಿಯಾಗಿರುವ ಸಂಯೋಜನಾ ಶುಲ್ಕವನ್ನು ಹಿಂಪಾವತಿಸುವ ಬಗ್ಗೆ.**

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕಾಲೇಜುಗಳ ಸಂಯೋಜನೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕೋಷ್ಟಕದಲ್ಲಿ ಪಟ್ಟಿಮಾಡಿರುವ ಕಾಲೇಜುಗಳು ಸಂಯೋಜನಾ ಶುಲ್ಕ ಪಾವತಿ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ನಿಗದಿತ ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಶುಲ್ಕಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಹಿಂಪಾವತಿಸುವಂತೆ ಕೋರಿ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರು ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು, 2024–25 ಹಾಗೂ 2025–26ನೇ ಸಾಲಿನ ಅಧಿಕೃತ ಸಂಯೋಜನಾ ಅಧಿಸೂಚನೆ ಹೊರಡಿಸುವ ಸಂಧರ್ಭದಲ್ಲಿ "ಕಣ್ತಪ್ಪಿನಿಂದ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು ಯಾವುದೇ ಕಾರಣಕ್ಕೂ ಮರಳಿಸಲಾಗುವುದಿಲ್ಲ. ಅಲ್ಲದೇ, ಕಣ್ತಪ್ಪಿನಿಂದ ಒಂದು ಕೋರ್ಸ್‌ಗೆ ಭರಿಸಬೇಕಾದ ಮೊತ್ತವನ್ನು ಮತ್ತೊಂದು ಕೋರ್ಸ್‌ಗೆ ಭರಿಸಿದಲ್ಲಿ ಅಂತಹ ಮೊತ್ತವನ್ನು ಪರಸ್ಪರ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ" ಎಂದು ಸೂಚಿಸಲಾಗಿರುತ್ತದೆ.

ಆದರೆ, ಈ ಕೆಳಕಂಡ ಕಾಲೇಜುಗಳ ಪ್ರಾಂಶುಪಾಲರುಗಳು, ಶುಲ್ಕ ತಃಖ್ತೆಯಲ್ಲಿ ನಮೂದಿಸಿರುವ ಕೋರ್ಸ್‌ವಾರು ಶುಲ್ಕಗಳನ್ನು ಗಮನಿಸಿದೇ ನಿಗದಿತ ಶುಲ್ಕಕ್ಕಿಂತ ಹೆಚ್ಚುವರಿ ಶುಲ್ಕವನ್ನು ಪಾವತಿಸಿರುತ್ತಾರೆ. ಸದರಿ ಹೆಚ್ಚುವರಿ ಪಾವತಿಯಾಗಿರುವ ಮೊತ್ತವನ್ನು ಹಿಂಪಾವತಿಸುವಂತೆ ಕೋರಿ ಮನವಿಗಳು ಸ್ವೀಕೃತಗೊಂಡಿರುತ್ತವೆ.

| SL. NO. | NAME OF THE COLLEGE | AFFLIATION TYPE | COURSE WITH INTAKE | APPLICATION DEMAND | COURSE DEMAND | TOTAL DEMAND | PAID | EXCESS | GST 18% | REIMBURSEMENT AMOUT |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| **2022-23** | | | | | | | | | | |
| 1 | ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು, ದಾವಣಗೆರೆ.(2022–23) | CTA | BA-180 BCA-60 BCOM-60 | 4012 | 2,21,604 | 2,25,616 | | | | |
| | | RPA - UG | BA-180 BBA-60 BCOM-60 | 4012 | 1,68,032 | 1,72,044 | | | | |
| | | NEW COURSE | B.Sc (MCs) | 0 | 65,018 | 65,018 | | | | |
| | | CTA-PG | MA-80 M.COM-60 | 4012 | 1,89,744 | 1,93,756 | | | | |
| | | | | | | 6,56,434 | 6,85,642 | 29,208 | 4,456 | 24,753 |
| | | | | | | | | | TOTAL | 24,753 |
| **2024-25** | | | | | | | | | | |
| 1 | ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಹೈಟೆಕ್ ಎಜ್ಯುಕೇಶನ್ ಕಾಲೇಜು, ದಾವಣಗೆರೆ. | RTA | B.com-180 BCA-360 | 5000 | 9,40,823 | 9,45,823 | 9,60,451 | 14,628 | 2,231 | 12,396 |
| 2 | ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಕೂಲ್ ಆಫ್ ಹೈ-ಟೆಕ್, ದಾವಣಗೆರೆ | RTA | BCA-240 | 5000 | 5,98,005 | 6,03,005 | 6,66,460 | 63,455 | 9,680 | 53,775 |

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

| | | | | | | | | | | |
|---|---|---|---|---|---|---|---|---|---|---|
| 3 | ಶ್ರೀಮಂಜುನಾಥಸ್ವಾಮಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | RTA | BA-180 BCOM-60 | 5000 | 39,810 | 44,810 | 84,622 | 39,812 | 6,073 | 33,738 |
| 4 | ಡಾ. ಜಾಕೀರ್ ಹುಸೇನ್ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | RTA | BA-240 BCOM-60 B.Sc-30 | 5000 | 1,15,354 | 1,20,354 | 1,65,144 | 44,790 | 6,832 | 37,957 |
| 5 | ಚೈತನ್ಯ ಹೈ–ಟೆಕ್ ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ ಮ್ಯಾನೈಜ್‌ಮೆಂಟ್ & ಸೈನ್ಸ್, ದಾವಣಗೆರೆ. | RTA | BBA-40 BCOM-60 BCA-120 | 5000 | 2,66,090 | 2,71,090 | 3,19,745 | 48,655 | 7,422 | 41,233 |
| 6 | ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಕಾಲೇಜು, ಹರಿಹರ. | RTA | BA-120 BCOM-120 BCA-60 BBA-60 B.Sc-205 MCOM - 25 | 10,000 | 4,23,850 | 4,33,850 | 4,62,188 | 28,338 | 4,323 | 24,015 |
| 7 | ಪಿ.ವಿ.ಎಸ್. ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | RTA | BCOM-60 BBA-60 BCA- 60 | 5000 | 1,23,728 | 1,28,728 | 1,58,000 | 29,272 | 4,465 | 24,806 |
| 8 | ಬಾಬಾ ಸಾಹೇಬ್ ಅಂಬೇಡ್ಕರ್ ಶತಮಾನೋತ್ಸವ ಪದವಿ ಮಹಾವಿದ್ಯಾಲಯ, ಹರಿಹರ. | RTA | BA-120 BCOM-40 | 5000 | 44,811 | 49,811 | 63,282 | 18,471 | 2,818 | 15,653 |
| | | | | | | | | | TOTAL | 2,43,573 |
| | | | | 2025-26 | | | | | | |
| 1 | ಜೈನ್ ಕಾಲೇಜ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ & ಮ್ಯಾನೇಜ್‌ಮೆಂಟ್, ದಾವಣಗೆರೆ. | RTA | BCA | 5000 | 299002 | 3,04,002 | 3,30,730 | 31,728 | 4840 | 26,888 |
| 2 | ಸೇಂಟ್ ಮೇರಿಸ್ ಪದವಿ ಕಾಲೇಜು, ಚಿತ್ರದುರ್ಗ. | New College | BA-60 BCA-60 BCOM-60 | 5000 | 6,27,783 | 6,32,783 | 9,44,894 | 3,12,107 | 47,610 | 2,64,497 |
| | | | | | | | | | TOTAL | 2,91,385 |
| | | | | 2026-27 | | | | | | |
| 1 | ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಕೂಲ್ ಆಫ್ ಹೈ–ಟೆಕ್, ದಾವಣಗೆರೆ. | RTA | BCA-240 | 5000 | 5,66,270 | 5,71,270 | 6,66,460 | 95,190 | 14,520 | 80,669 |
| | | | | | | | | | TOTAL | 80,669 |

ಈ ಕುರಿತು ದಿನಾಂಕ:12.03.2026ರಂದು ಜರುಗಲಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಚರ್ಚೆಗೆ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಈ ಮೇಲ್ಕಂಡ ವಿವಿಧ ಕಾಲೇಜುಗಳಿಂದ ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತಕ್ಕೆ ಜಿ.ಎಸ್.ಟಿ. ಯನ್ನು ಕಟಾಯಿಸಿ ಹಿಂಪಾವತಿಗೆ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 31 | |
|---|---|
| ವಿಷಯ ಸಂಖ್ಯೆ: | ಸಿಂ.05(e)/(03/26) |

## –: ಟಿಪ್ಪಣಿ :–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು – ಇಲ್ಲಿನ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರವೇಶ ಮಿತಿಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ: 1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ತುರುವನೂರು – ಇವರ ಪತ್ರ ಸಂ:ದಾವಿವಿ/ಘಕಾ/2025–26/122 ದಿ:09.01.2026

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.02.2026

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವಂತೆ ಅನುಮೋದನೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2026–27ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಪದವಿ | ವಿಷಯ/ಸಮೂಹ | ಪ್ರವೇಶ ಮಿತಿ |
|---|---|---|---|
| 1 | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP | 60 |
| | | ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ – HPS | 60 |
| 2 | ಬಿ.ಎಸ್ಸಿ. | ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ – CBZ | 30 |
| | | ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, – PCM | 30 |
| | | ಭೌತಶಾಸ್ತ್ರ, ಗಣಿತಶಾಸ್ತ್ರ, ಕಂಪ್ಯೂಟರ್ ಸೈನ್ಸ್ – PMCs | 30 |
| 3 | ಬಿ.ಕಾಂ. | ಕಡ್ಡಾಯ ವಿಷಯಗಳು | 60 |

ತತ್ಸಂಬಂಧವಾಗಿ, ದಿನಾಂಕ:12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ತುರುವನೂರು, ಇಲ್ಲಿಗೆ ಮೇಲ್ಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮಿತಿ ನೀಡಿರುವುದಕ್ಕೆ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 32 | |
|---|---|
| ವಿಷಯ ಸಂಖ್ಯೆ: | ಸಿಂ.05(f)/(03/26) |

## –ಃ ಟಿಪ್ಪಣಿ ಃ–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹರಿಯಬ್ಬೆ – ಇಲ್ಲಿನ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರವೇಶ ಮಿತಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ:
1. ಸಂಯೋಜನಾಧಿಕಾರಿಗಳು, ದಾ.ವಿ.ಘ.ಕಾ. ಹರಿಯಬ್ಬೆ – ಇವರ ಪತ್ರ ಸಂ:ದಾವಿವಿ/ಘಕಾಹ/2025–26/150 ದಿನಾಂಕ:03.02.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:17.02.2026

*********

ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ – ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹರಿಯಬ್ಬೆ, ಇಲ್ಲಿನ ಸಂಯೋಜನಾಧಿಕಾರಿಗಳು ಉಲ್ಲೇಖಿತ(1) ಪತ್ರದಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವಂತೆ ಅನುಮೋದನೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2026–27ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಪದವಿ | ವಿಷಯ/ಸಮೂಹ | ಪ್ರವೇಶ ಮಿತಿ |
|---|---|---|---|
| 1 | ಬಿ.ಎ. | ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ – HEP | 40 |
| | | ಸಮಾಜಶಾಸ್ತ್ರ, ಕನ್ನಡ, ಇತಿಹಾಸ – SKH | 40 |
| | | ಇತಿಹಾಸ, ಇಂಗ್ಲೀಷ್, ಸಮಾಜಶಾಸ್ತ್ರ – HES | 40 |
| 2 | ಬಿ.ಕಾಂ. | ಕಡ್ಡಾಯ ವಿಷಯಗಳು | 40 |

ತತ್ಸಂಬಂಧವಾಗಿ, ದಿನಾಂಕ:12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ಹರಿಯಬ್ಬೆ ಇಲ್ಲಿಗೆ ಮೇಲ್ಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮಿತಿ ನೀಡಿರುವುದಕ್ಕೆ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 33 | |
|---|---|
| ವಿಷಯ ಸಂಖ್ಯೆ: | ಸಿಂ.05(g)/(03/26) |

## –: ಟಿಪ್ಪಣಿ :–

ವಿಷಯ: **ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ 2026–27ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿಯ ಪ್ರವೇಶ ಮಿತಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಪ್ರಾಚಾರ್ಯರು, ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ ವಿದೃಕಮ/ ಶೈಕ್ಷಣಿಕ/2025–26/271 ದಿನಾಂಕ:23.02.2026

*********

ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ, ದಾವಣಗೆರೆ – ಇಲ್ಲಿನ ಪ್ರಾಚಾರ್ಯರು ಉಲ್ಲೇಖಿತ(1) ಪತ್ರದಲ್ಲಿ 2026–27ನೇ ಶೈಕ್ಷಣಿಕ ಸಾಲಿನಿಂದ ಈ ಕೆಳಕಂಡ ವಿವಿಧ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ನೀಡುವಂತೆ ಅನುಮೋದನೆ ಕೋರಿರುತ್ತಾರೆ. ಸದರಿ ವಿಷಯನ್ನು ಪರಿಶೀಲಿಸಲಾಗಿದ್ದು, ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸಾರ 2026–27ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಪದವಿ/ಕೋರ್ಸ್‌ಗಳ ವಿವರ ಈ ಕೆಳಕಂಡಂತಿದೆ.

| Sl. No. | Degree | Departments | Intake Seats |
|---|---|---|---|
| UG BVA 1ST AND 2ND SEMESTER | | | |
| 01 | BVA | Foundation | 90 |
| UNDER GRADUATE - Bachelor of Visual Arts (BVA) w.e.f. 3rd Semester | | | |
| 02 | BVA | Applied Art | 25 |
| | BVA | Painting | 25 |
| | BVA | Sculpture | 20 |
| | BVA | Animation | 20 |
| POST GRADUATE- Master of Visual Arts ( MVA) | | | |
| 03 | MVA | Applied Art | 27 |
| | MVA | Painting | 27 |

ತತ್ಸಂಬಂಧವಾಗಿ, ದಿನಾಂಕ:12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

2026–27ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯ ದೃಶ್ಯಕಲಾ ಕಾಲೇಜ್, ದಾವಣಗೆರೆ ಇಲ್ಲಿಗೆ ಮೇಲ್ಕಂಡ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮಿತಿ ನೀಡಿರುವುದಕ್ಕೆ ಸಭೆಯು ಒಮ್ಮತದಿಂದ ಘಟನೋತ್ತರವಾಗಿ ಅನುಮೋದಿಸಿತು.

ಕುಲಸಚಿವರು                    ಕುಲಪತಿಗಳು

| ಕ್ರೀಡಾ ವಿಭಾಗ – 34 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(03/26) |

## -: ಟಿಪ್ಪಣಿ :-

**ವಿಷಯಃ 2025–26ನೇ ಸಾಲಿನ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಟ್ರ್ಯಾಕ್‌ಸೂಟ್‌ಗಳ ಖರೀದಿಸಲಾಗಿದ್ದು ಹಣ ಪಾವತಿ ಮಾಡುವ ಕುರಿತು.**

*********

2025–26ನೇ ಸಾಲಿನ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗೆ ಕ್ರೀಡಾಪಟುಗಳು ಭಾಗವಹಿಸಲು ಟ್ರ್ಯಾಕ್‌ಸೂಟ್‌ಗಳನ್ನು ವಿತರಿಸಬೇಕಾಗಿರುವುದರಿಂದ ದರಪಟ್ಟಿ ಆಧಾರದ ಮೇಲೆ ಖರೀದಿಸಲು ನಿಯಮಾನುಸಾರ L1 ಸಂಸ್ಥೆಯಾದ M/s BSR Industries, Flat No. #654, Neginhal, Bailhongal, Belagavi-591102 ಇವರಿಂದ ಟ್ರ್ಯಾಕ್‌ಸೂಟ್‌ಗಳನ್ನು ಖರೀದಿಸಲಾಗಿರುತ್ತದೆ. ಈಗ ಸದರಿ ಸಂಸ್ಥೆಯವರು ರೂ.3,79,600/– (ರೂಪಾಯಿಗಳು ಮೂರು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಆರು ನೂರ ಮಾತ್ರ)ಗಳ ಬಿಲ್ಲನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಮೇಲ್ಕಂಡ ಸಂಸ್ಥೆಯವರಿಗೆ ಹಣ ಪಾವತಿಸಲು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

2025–26ನೇ ಸಾಲಿನ ಅಂತರ ವಿಶ್ವವಿದ್ಯಾನಿಲಯ ಪಂದ್ಯಾವಳಿಗಳಿಗಳಲ್ಲಿ ಭಾಗವಹಿಸಿದ್ದ ಕ್ರೀಡಾಪಟುಗಳಿಗೆ ಟ್ರ್ಯಾಕ್‌ಸೂಟ್‌ಗಳನ್ನು ದರಪಟ್ಟಿ ಆಧಾರದ ಮೇಲೆ ಖರೀದಿಸಲಾಗಿರುವುದರಿಂದ L1 ಸಂಸ್ಥೆಯಾದ M/s BSR Industries, Flat No. #654, Neginhal, Bailhongal, Belagavi - 591102 ಇವರಿಗೆ ರೂ.3,79,600/– ಗಳನ್ನು ನಿಯಮಾನುಸಾರ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಕ್ರೀಡಾ ವಿಭಾಗ – 35 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(03/26) |

## –: ಟಿಪ್ಪಣಿ :–

**ವಿಷಯ: ಕ್ರೀಡಾ ವಿಭಾಗಕ್ಕೆ ಮಂಜೂರು ಮಾಡಲಾಗಿದ್ದ ಮುಂಗಡ ಬಿಲ್ಲುಗಳಿಗೆ ಸಲ್ಲಿಸಲಾದ ಎನ್.ಡಿ.ಸಿ. ಹುಂಡಿಗಳ ಕಾಲ ವಿಳಂಬ ಮನ್ನಾ ಮಾಡುವ ಕುರಿತು.**

*********

ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದ 2023–24 & 2024–25ನೇ ಸಾಲಿಗೆ ಸಂಬಂಧಿಸಿಂದಂತೆ ವಿವಿಧ ಕ್ರೀಡಾ ಚಟುವಟಿಕೆಗಳಿಗೆ ಮುಂಗಡವಾಗಿ ಪಡೆದುಕೊಂಡಿರುವ ಎ.ಸಿ. ಬಿಲ್ಲುಗಳಿಗೆ ನಿಗಧಿತ ಅವಧಿಯೊಳಗಾಗಿ ಲೆಕ್ಕ ತಿರುವಳಿ ಮಾಡಿಕೊಳ್ಳಲು ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದೇ ಇರುವುದರಿಂದ ಕ್ರೀಡಾ ವಿಭಾಗದ ಎ.ಸಿ. ಬಿಲ್ಲುಗಳಿಗೆ ಎದುರಾಗಿ ಎನ್.ಡಿ.ಸಿ ಹುಂಡಿಗಳಿಗೆ ಕಾಲ ವಿಳಂಬ ಮನ್ನಾ ಮಾಡಿ ಲೆಕ್ಕ ತಿರುವಳಿ ಮಾಡಿಕೊಳ್ಳಲು ಅನುಬಂಧ–1ರಲ್ಲಿ ತೋರಿಸಿರುವ ಬಿಲ್ಲುಗಳಿಗೆ ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಕ್ರೀಡಾ ವಿಭಾಗದ 2023–24 & 2024–25ನೇ ಸಾಲಿಗೆ ಸಂಬಂಧಿಸಿಂದಂತೆ ವಿವಿಧ ಕ್ರೀಡಾ ಚಟುವಟಿಕೆಗಳಿಗೆ ಮುಂಗಡವಾಗಿ ಪಡೆದುಕೊಂಡಿರುವ ಎ.ಸಿ. ಬಿಲ್ ಎದುರಾಗಿ ಎನ್.ಡಿ.ಸಿ ಹುಂಡಿಗಳಿಗೆ ಸಂಬಂಧಿಸಿದಂತೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಇದೊಂದು ಬಾರಿ ಕಾಲ ವಿಳಂಬ ಮನ್ನಾ ಮಾಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಮುಂದುವರೆದು, ವಿವಿಧ ಕ್ರೀಡಾ ಚಟುವಟಿಕೆಗಳಿಗೆ ಮುಂಗಡವಾಗಿ ಪಡೆದುಕೊಂಡಿರುವ ಎ.ಸಿ. ಬಿಲ್ಲಿಗೆ ಸಂಬಂಧಿಸಿದಂತೆ ಎನ್.ಡಿ.ಸಿ. ಬಿಲ್ಲುಗಳನ್ನು 01 ತಿಂಗಳೊಳಗಾಗಿ ಸಲ್ಲಿಸಿದೇ ಇದ್ದಲ್ಲಿ ಸಂಬಂಧಿಸಿದವರನ್ನೇ ನೇರ ಹೊಣೆಗಾರರನ್ನಾಗಿ ಮಾಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಕ್ರೀಡಾ ವಿಭಾಗ – 36 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(03/26) |

## –: ಟಿಪ್ಪಣಿ :–

ವಿಷಯಃ **ದಿನಾಂಕ:16.02.2026 ರಂದು ಏರ್ಪಡಿಸಲಾಗಿದ್ದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:09.03.2026

*********

2025–26 ನೇ ಸಾಲಿನ ಹಾಗೂ 2026–27ನೇ ಸಾಲಿಗೆ ದಿನಾಂಕ:16.02.2026 ರಂದು ಏರ್ಪಡಿಸಲಾಗಿದ್ದ ಕ್ರೀಡಾ ಸಲಹಾ ಸಮಿತಿ ಸಭೆಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ವಿಷಯಸೂಚಿಯನ್ನು ಕುರಿತು ಚರ್ಚಿಸಿ ನಿರ್ಣಯಿಸಿದ ನಡಾವಳಿಗಳನ್ನು ಉಲ್ಲೇಖಿತ ಮಾನ್ಯ ಕುಲಪತಿಗಳ ಅನುಮೋದನೆಯನ್ವಯ ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಿನಾಂಕಃ16.02.2026 ರಂದು ಏರ್ಪಡಿಸಲಾಗಿದ್ದ ಕ್ರೀಡಾ ಸಲಹಾ ಸಮಿತಿ ಸಭೆಯ ನಡಾವಳಿಗಳ ಕುರಿತು ಚರ್ಚಿಸಿ ಸದರಿ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕ್ರೀಡಾ ವಿಭಾಗ – 37 | |
|---|---|
| ವಿಷಯ ಸಂಖ್ಯೆ: | ಸಿಂ.06(d)/(03/26) |

## –ಃ ಟಿಪ್ಪಣಿ ಃ–

**ವಿಷಯಃ** **ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರಣದಲ್ಲಿ ಅಖಿಲ ಭಾರತ ದಕ್ಷಿಣ ವಲಯದ ಅಂತರ್ ವಿಶ್ವವಿದ್ಯಾನಿಲಯಗಳ ಪುರುಷರ ಖೋ–ಖೋ ಪಂದ್ಯಾವಳಿಗಳನ್ನು ಏರ್ಪಡಿಸಲು ವಿಶ್ವವಿದ್ಯಾನಿಲಯದಿಂದ ಹಣಕಾಸಿನ ನೆರವು ನೀಡುವ ಕುರಿತು.**

*********

2025–26ನೇ ಸಾಲಿನಲ್ಲಿ ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟಿಸ್ (AIU) ನವದೆಹಲಿ ರವರ ನಿರ್ದೇಶನದಂತೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಅಖಿಲ ಭಾರತ ದಕ್ಷಿಣ ವಲಯದ ಅಂತರ ವಿಶ್ವವಿದ್ಯಾನಿಲಯ ಪುರುಷ ಖೋ–ಖೋ ಪಂದ್ಯಾವಳಿಯನ್ನು ದಿನಾಂಕಃ26.03.2026 ರಿಂದ 29.03.2026 ರವರೆಗೆ ಆಯೋಜಿಸಿರುವ ಪಂದ್ಯಾವಳಿಯ ಖರ್ಚು – ವೆಚ್ಚಗಳಿಗಾಗಿ ವಿಶ್ವವಿದ್ಯಾನಿಲಯದಿಂದ ಹಣಕಾಸು ನೆರವು ನೀಡುವ ಕುರಿತು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**ವಿವರಣೆ:**

- ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಇಂತಹ ಪಂದ್ಯಾವಳಿಗಳನ್ನು ಆಯೋಜಿಸಿರುವುದರಿಂದ ವಿಶ್ವವಿದ್ಯಾನಿಲಯಕ್ಕೆ ಮಾನ್ಯತೆ ಸಿಗುವುದರೊಂದಿಗೆ ವಿಶ್ವವಿದ್ಯಾನಿಲಯದಿಂದ ಸಹಕಾರದ ಅಗತ್ಯವಿರುತ್ತದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

## :: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ26.03.2026 ರಿಂದ 29.03.2026 ರವರೆಗೆ ಆಯೋಜಿಸಲಾಗುವ ಅಖಿಲ ಭಾರತ ದಕ್ಷಿಣ ವಲಯದ ಅಂತರ ವಿಶ್ವವಿದ್ಯಾನಿಲಯ ಪುರುಷರ ಖೋ–ಖೋ ಪಂದ್ಯಾವಳಿಯ ಖರ್ಚು ವೆಚ್ಚಕ್ಕಾಗಿ ವಿಶ್ವವಿದ್ಯಾನಿಲಯವು ರೂ.7.50 ಲಕ್ಷಗಳ ಹಣಕಾಸಿನ ನೆರವು ನೀಡಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು — ಕುಲಪತಿಗಳು

| ಕ್ರೀಡಾ ವಿಭಾಗ – 38 | |
|---|---|
| ವಿಷಯ ಸಂಖ್ಯೆ: | ಸಿಂ.06(e)/(03/26) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ, ಆವರಣದಲ್ಲಿ ಅಖಿಲ ಭಾರತ ದಕ್ಷಿಣ ವಲಯದ ಅಂತರ್ ವಿಶ್ವವಿದ್ಯಾನಿಲಯಗಳ ಮಹಿಳಾ ಖೋ–ಖೋ ಪಂದ್ಯಾವಳಿಗಳನ್ನು ಏರ್ಪಡಿಸಲು ವಿಶ್ವವಿದ್ಯಾನಿಲಯದಿಂದ ಹಣಕಾಸಿನ ನೆರವು ನೀಡುವ ಕುರಿತು.**

*********

2025–26ನೇ ಸಾಲಿನಲ್ಲಿ ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟಿಸ್ (AIU) ನವದೆಹಲಿ ರವರ ನಿರ್ದೇಶನದಂತೆ ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಅಖಿಲ ಭಾರತ ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯ ಮಹಿಳಾ ಖೋ–ಖೋ ಪಂದ್ಯಾವಳಿಯನ್ನು ದಿನಾಂಕ:01.04.2026 ರಿಂದ 04.04.2026ರವರೆಗೆ ಆಯೋಜಿಸಲಾಗಿರುವ ಪಂದ್ಯಾವಳಿಯ ಖರ್ಚು – ವೆಚ್ಚಗಳಿಗಾಗಿ ವಿಶ್ವವಿದ್ಯಾನಿಲಯದಿಂದ ಹಣಕಾಸು ನೆರವು ನೀಡುವ ಕುರಿತು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

**:: ನಿರ್ಣಯ ::**

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ01.04.2026 ರಿಂದ 04.04.2026ರವರೆಗೆ ಆಯೋಜಿಸಲಾಗುವ ಅಖಿಲ ಭಾರತ ದಕ್ಷಿಣ ವಲಯದ ಅಂತರ ವಿಶ್ವವಿದ್ಯಾನಿಲಯ ಮಹಿಳಾ ಖೋ–ಖೋ ಪಂದ್ಯಾವಳಿಯ ಖರ್ಚು ವೆಚ್ಚಕ್ಕಾಗಿ ವಿಶ್ವವಿದ್ಯಾನಿಲಯವು ರೂ.7.50 ಲಕ್ಷಗಳ ಹಣಕಾಸಿನ ನೆರವು ನೀಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಹಣಕಾಸು ವಿಭಾಗ – 39 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(03/26) |

## –ಃ ಟಿಪ್ಪಣಿ ಃ–

**ವಿಷಯಃ ಇ–ಹರಾಜು ಮೂಲಕ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೂಡಿಕೆ ಮಾಡಿರುವ ಬಡ್ಡಿ ಮೊತ್ತಕ್ಕೆ ಸಂಬಂಧಿಸಿದಂತೆ ಅನುಮೋದನೆಗಾಗಿ.**

ಉಲ್ಲೇಖ:
1. ದಾವಿವಿ:ಹವಿ–1:2025–26:388:ದಿನಾಂಕ:18.11.2025.ಇ–ಹರಾಜು ಪ್ರಕಟಣೆ.
2. ಸಂಖ್ಯೆ ದಾವಿವಿ ಹವಿ:–1: 2025–26:ದಿನಾಂಕ: 28.11.2025 ತಾಂತ್ರಿಕ ಬಿಡ್
3. ಸಂಖ್ಯೆ ದಾವಿವಿ ಹವಿ:–1: 2025–26:ದಿನಾಂಕ:29.11.2025 ಹಣಕಾಸು ಬಿಡ್
4. ಎಸ್.ಬಿ.ಐ.ವ್ಯವಸ್ಥಾಪಕರ ಪತ್ರ ದಿನಾಂಕ:29.11.2025.
5. ಎಸ್.ಬಿ.ಐ.ವ್ಯವಸ್ಥಾಪಕರ ಪತ್ರ ಸಂಖ್ಯೆ ಡಿಪಾಸಿಟ್:06/2025–26/ ದಿನಾಂಕ: 13.01.2026.
6. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:12.02.2026

*********

ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಆರ.ಬಿ.ಐ. ಬಡ್ಡಿ ದರ 6.50% ದರದಂತೆ ವಿಶ್ವವಿದ್ಯಾನಿಲಯದಿಂದ ಈಗಾಗಲೇ ತೊಡಗಿಸಿರುವ ನಿಶ್ಚಿತ ಠೇವಣಿಗಳನ್ನು ಆಯಾ ತಿಂಗಳು/ಮಾಹೆಯಲ್ಲಿಯೇ ನವೀಕರಿಸಲು (ರಿನೀವಲ್) ಹಾಗೂ ಹೊಸ ನಿಶ್ಚಿತ ಠೇವಣಿಗಳ ಹೂಡಿಕೆಗಾಗಿ ಇ–ಹರಾಜು ಮೂಲಕ ಹೂಡಿಕೆ ಮಾಡಲು ಉದ್ದೇಶಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ (ಕೆ.ಟಿ.ಪಿ.ಪಿ) ಅಧಿನಿಯಮ 1999, ನಿಯಮಗಳು 2000ರ ಪ್ರಕಾರ e-portal ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು.

ಮುಂದುವರೆದು ಶಿವಗಂಗೋತ್ರಿ ಆವರಣದ ಎಸ್.ಬಿ.ಐ. ಶಾಖಾ ವ್ಯವಸ್ಥಾಪಕರ ಪತ್ರ ದಿನಾಂಕ: 29.11.2025 ರಂತೆ Live Auction ನಲ್ಲಿ ಕನಿಷ್ಠ ನಿಗಧಿತ ಬಡ್ಡಿ ದರವು ವರ್ಷಕ್ಕೆ 6.52% ಆಗಿದ್ದು, ನಮ್ಮ ಬಡ್ಡಿ ದರ ಒಂದು ವರ್ಷಕ್ಕೆ 6.25% ಬಡ್ಡಿದರವಾಗಿರುತ್ತದೆ, ಪೋರ್ಟಲ್‌ನಲ್ಲಿ ಸ್ಲಾಬ್ ವ್ಯತ್ಯಾಸದಿಂದಾಗಿ ಬಡ್ಡಿದರ ಮಾರ್ಪಾಡು ಮಾಡಿ ನಮೂದಿಸಲು ತಾಂತ್ರಿಕವಾಗಿ ಅವಕಾಶವಿಲ್ಲದ ಕಾರಣ, ಹಣಕಾಸು ಬಿಡ್ಡಿಂಗ್‌ನಲ್ಲಿ ಭಾಗವಹಿಸಲು ಅವಕಾಶವಾಗಲಿಲ್ಲ ಎಂದು ದಿನಾಂಕ:29.11.2025ರ ಪತ್ರದಲ್ಲಿ ತಿಳಿಸಿರುತ್ತಾರೆ.

ಶಿವಗಂಗೋತ್ರಿ ಎಸ್.ಬಿ.ಐ. ವ್ಯವಸ್ಥಾಪಕರಿಗೆ ತಾಂತ್ರಿಕ ಬಿಡ್ ಮತ್ತು ಹಣಕಾಸು ಬಿಡ್ ನಡಾವಳಿಯ ಮೂಲ ಪ್ರತಿಗಳೊಂದಿಗೆ ಎಂ.ಓ.ಯು ಮಾಡಿಕೊಳ್ಳಲು ಹಣಕಾಸು ವಿಭಾಗದಿಂದ ದಾವಿವಿ:ಹವಿ–1:2025–26 :420(4), ದಿನಾಂಕ:01.12.2025ರ ಪತ್ರದಲ್ಲಿ ಕೋರಲಾಗಿತ್ತು. ಈ ಸಂಬಂಧ ಶಾಖಾ ವ್ಯವಸ್ಥಾಪಕರು ದಿನಾಂಕ: 13.01.2026ರ ಪತ್ರದಲ್ಲಿ ಆರ್.ಬಿ.ಐ. ಮಾರ್ಗಸೂಚಿಯನ್ವಯ ಬಡ್ಡಿದರ ಇಳಿಕೆಯಾಗಿರುತ್ತದೆ. ಕಾರಣ, ವಿಶ್ವವಿದ್ಯಾನಿಲಯದ ನಿಶ್ಚಿತ ಠೇವಣಿ ಬಡ್ಡಿ ದರಕ್ಕೆ ಸಂಬಂಧಿಸಿದಂತೆ ಆಯಾ ಸಮಯದಲ್ಲಿ ಆರ್.ಬಿ.ಐ. ಮಾರ್ಗಸೂಚಿಯ ಬಡ್ಡಿ ದರವನ್ನು ಅಳವಡಿಸಲಾಗುವುದು ಎಂದು ಹಾಗೂ ಎಂ.ಓ.ಯು ಮಾಡಿಕೊಳ್ಳಲು ಶಾಖಾ ವ್ಯವಸ್ಥಾಪಕರಿಗೆ ಅವಕಾಶವಿರುವುದಿಲ್ಲ ಎಂದು ಪತ್ರಿಸಿರುತ್ತಾರೆ.

ಸದರಿ ವ್ಯವಸ್ಥಾಪಕರ ಪತ್ರವನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ತರುತ್ತಾ ಇ–ಟೆಂಡರ್ ಷರತ್ತಿಗೂ ಶಾಖಾ ವ್ಯವಸ್ಥಾಪಕರ ಪತ್ರದಲ್ಲಿ ಬರೆದಿರುವುದಕ್ಕೂ ನಿಶ್ಚಿತ ಠೇವಣಿ ಬಡ್ಡಿ ದರ ವ್ಯತ್ಯಾಸವಾಗುವುದನ್ನು ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಸಲ್ಲಿಸಿದೆ.

**:: ನಿರ್ಣಯ ::**

ಇ–ಹರಾಜು ಮೂಲಕ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್ ಭಾರತೀಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಹೂಡಿಕೆ ಮಾಡಿರುವ ಬಡ್ಡಿ ದರಕ್ಕೆ ಸಂಬಂಧಿಸಿದಂತೆ ವ್ಯತ್ಯಾಸವಾಗುವುದನ್ನು ಸಭೆಯು ಕೂಲಂಕುಶವಾಗಿ ಚರ್ಚಿಸಿ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 40 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(03/26) |

## –: ಟಿಪ್ಪಣಿ :–

**ವಿಷಯ: ಲೆಕ್ಕ ಪರಿಶೋಧನಾ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಅನುಮೋದನೆಗಾಗಿ.**

ಉಲ್ಲೇಖ: 1. ಸಿಂಡಿಕೇಟ್ ನಿರ್ಣಯ ದಿನಾಂಕ: 21.01.2025.
2. ಸರ್ಕಾರದ ಪತ್ರ ಸಂಖ್ಯೆ ರಾಲೆಪ/ಲೆಪವಿ–3/16/ಸಿಪವ್ಯ/2022–23/2025–26/3508, ದಿನಾಂಕ:12.01.2026.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:20.02.2026

*********

**ಲೆಕ್ಕಪರಿಕಶೋಧನಾ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ವಿವರ:**

| ಕ್ರ.ಸಂ. | ಲೆಕ್ಕಪರಿಶೋಧನಾ ವರ್ಷ | ಶುಲ್ಕದ ವಿವರ ರೂ.ಗಳಲ್ಲಿ | ಷರಾ |
|---|---|---|---|
| 01 | 2013–14 | 30,092–06 | **ಒಟ್ಟು ಶುಲ್ಕದ ರೂ.27,64,427ಗಳಿಗೆ ಸಂಬಂಧಿಸಿದಂತೆ:** **ದಿನಾಂಕ:21.01.2025ರ ಸಿಂಡಿಕೇಟ್ ನಿರ್ಣಯದಲ್ಲಿ** 2024–25ನೇ ಸಾಲಿಗೆ 50% ಹಾಗೂ 2025–26ನೇ ಸಾಲಿನಲ್ಲಿ 50% ಪಾವತಿಗೆ ಅನುಮೋದಿಸಲಾಗಿತ್ತು. ಆದ್ದುದ್ದರಿಂದ 2024–25ನೇ ಸಾಲಿನಲ್ಲಿ ಧನಾದೇಶ ಸಂಖ್ಯೆ: 572619 ದಿನಾಂಕ: 10.02.2025 ರಲ್ಲಿ ಕೆ2 ಮೂಲಕ ಈಗಾಗಲೇ ರೂ.13,64,427 ಗಳನ್ನು ಪಾವತಿಸಲಾಗಿದೆ. |
| 02 | 2014–15<br>2015–16 | 7,20,524–93 | |
| 03 | 2017–18<br>2018–19 | 20,13810–00 | |
| | **ಒಟ್ಟು ರೂ.** | **27,64,427–00** | |

ಮೇಲ್ಕಂಡಂತೆ ಒಟ್ಟು ಮೊತ್ತ ರೂ.27,64,427/– ಗಳಲ್ಲಿ ದಿನಾಂಕ:21.01.2025ರ ಸಿಂಡಿಕೇಟ್ ನಿರ್ಣಯದಂತೆ 2024–25ನೇ ಸಾಲಿನಲ್ಲಿ 50% ಅಂದರೆ ರೂ.13,64,427ಗಳನ್ನು ಪಾವತಿಸಲಾಗಿದೆ. ಉಳಿದ 50% ಮೊತ್ತದೊಂದಿಗೆ ಕೆಳಕಂಡ ವಿವರದಂತೆ ಲೆಕ್ಕಪತ್ರ ಇಲಾಖೆಗೆ ಲೆಕ್ಕಪರಿಶೋಧನಾ ಶುಲ್ಕವನ್ನು ಪಾವತಿಸಬೇಕಾಗಿರುತ್ತದೆ.

| ಕ್ರ.ಸಂ | ಲೆಕ್ಕಪರಿಶೋಧನಾ ವರ್ಷ | ಶುಲ್ಕದ ವಿವರ ರೂ.ಗಳಲ್ಲಿ |
|---|---|---|
| 01 | 50% ಮೊತ್ತ | 14,00,000–00 |
| 02 | 2022–23 | 3,28,000–00 |
| 03 | 2023–24 | 2,22,636–00 |
| | **ಒಟ್ಟು ಮೊತ್ತ** | **19,50,636–00** |

ರೂ. 27,64,427/– ಗಳಲ್ಲಿ 2025–26ನೇ ಸಾಲಿಗೆ 50% ಶುಲ್ಕ ಪಾವತಿಸ ಬೇಕಾದ ಶುಲ್ಕದೊಂದಿಗೆ 2022–23, 2023–24ನೇ ಸಾಲಿನ ಲೆಕ್ಕಪರಿಶೋಧನಾ ಒಟ್ಟು ಶುಲ್ಕ ರೂ.19,50,636–00ಗಳನ್ನು ಲೆಕ್ಕಪತ್ರ ಇಲಾಖೆಗೆ ಪಾವತಿಸಲು ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

:: ನಿರ್ಣಯ ::

2025–26ನೇ ಸಾಲಿಗೆ 50% ಪಾವತಿಸಬೇಕಾದ ಶುಲ್ಕದೊಂದಿಗೆ 2022–23, 2023–24ನೇ ಸಾಲಿನ ಲೆಕ್ಕಪರಿಶೋಧನಾ ಒಟ್ಟು ಶುಲ್ಕ ರೂ.19,50,636–00 ಗಳನ್ನು ಲೆಕ್ಕಪತ್ರ ಇಲಾಖೆಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು	ಕುಲಪತಿಗಳು

| ಪರೀಕ್ಷಾಂಗ ವಿಭಾಗ – 41 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(03/26) |

# –: ಟಿಪ್ಪಣಿ :–

**ವಿಷಯಃ** **13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ತಿಂಡಿ ಮತ್ತು ಊಟೋಪಚಾರ/ ಸ್ವರ್ಣ ಪದಕ/ಪೆಂಡಾಲ್ (ಶಾಮಿಯಾನ) ಇತರೆ ವ್ಯವಸ್ಥೆಗಳನ್ನು ಸೇವೆ/ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಸಂಸ್ಥೆಗಳಿಗೆ ಹಣ ಪಾವತಿ ಮಾಡಲಾಗಿರುವುದನ್ನು ಸಿಂಡಿಕೇಟ್ ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸುವ ಬಗ್ಗೆ.**

ಉಲ್ಲೇಖ:
1. ದಿನಾಂಕ:29.01.2026 ರಂದು ನಡೆದ ಸಿಂಡಿಕೇಟ್ ಅಸಮಾನ್ಯ ಸಭೆಯ ನಿರ್ಣಯ
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:02.03.2026

*********

ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಕ್ಕೆ ವಿವಿಧ ಸರಬರಾಜು/ಸೇವೆ ಒದಗಿಸುವ ಸಂಸ್ಥೆಗಳಿಗೆ ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಸರಬರಾಜುದಾರರಿಗೆ ಹಣ ಪಾವತಿ ಮಾಡಲು ಉಲ್ಲೇಖ (1)ರಲ್ಲಿ ಜರುಗಿದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಸದರಿ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ, ದಿನಾಂಕ: 30.01.2026ರಂದು ನಡೆದ 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ವಿವಿಧ ಸರಬರಾಜು/ಸೇವೆ ಒದಗಿಸಿರುವ ಸಂಸ್ಥೆಯ ಮಾಲೀಕರುಗಳ ಹಿತದೃಷ್ಟಿಯಿಂದ, ಈ ಕೆಳಕಂಡಂತೆ ಸಂಬಂಧಿಸಿದ ಸಂಸ್ಥೆಯ ಮಾಲೀಕರುಗಳಿಗೆ ಹಣ ಪಾವತಿ ಮಾಡಲಾಗಿದೆ.

| ಕ್ರ. ಸಂ. | ವಿವರ | ಬಿಲ್ ಸಂಖ್ಯೆ / ದಿನಾಂಕ: | ಮೊತ್ತ |
|---|---|---|---|
| 1 | ತಿಂಡಿ/ಊಟೋಪಚಾರ ಸರಬರಾಜು ಮಾಡಿದ ಬಾಬ್ತು.<br>**a)** M/s Nandi Enterprises, Davangere.<br>b) M/s Sri Devi Home Industries, Davangere. | Bill No:039<br>Date:03.02.2026<br>Bill No:5904<br>Date:02.02.2026 | 4,97,000=00<br>2,37,600=00 |
| 2 | ಪೆಂಡಾಲ್ (ಶಾಮಿಯಾನ) ಮತ್ತಿತರೆ ಸೇವೆ ಒದಗಿಸಿದ ಬಾಬ್ತು<br>M/s Raju Enterprises Bangalore. | Bill No: 91/RE/2025-26<br>Date:02.02.2026 | 26,28,000=00 |
| 3 | ಚಿನ್ನದ ಪದಕ ಖರೀದಿಸಿದ ಬಾಬ್ತು<br>M/s Sathyam Jewellery Works, Bangalore. | Bill No: 6010<br>Date:22.01.2026 | 4,99,674=00 |
| 4 | 13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಲೇಖನ/ ಮುದ್ರಿತ ಲೇಖನ ಸಾಮಾಗ್ರಿಗಳನ್ನು ಸರಬರಾಜು ಮಾಡಿ ಬಾಬ್ತು M/s Kesari Techonoliges, Davangere. | Bill No.0776<br>Date:19.02.2026 | 6,82,300=00 |

ತತ್ಸಂಧವಾಗಿ, ಉಲ್ಲೇಖ (1) ರಂತೆ, ಸಿಂಡಿಕೇಟ್ ಸಭೆಯ ಅನುಮೋದನೆ ಕಾಯ್ದಿರಿಸಿ, ಹಣ ಪಾವತಿ ಮಾಡಿರುವುದನ್ನು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಸಲ್ಲಿಸಲಾಗಿದೆ.

**:: ನಿರ್ಣಯ ::**

13ನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ತಿಂಡಿ ಮತ್ತು ಊಟೋಪಚಾರ/ಸ್ವರ್ಣ ಪದಕ/ ಪೆಂಡಾಲ್ (ಶಾಮಿಯಾನ) ಇತರೆ ವ್ಯವಸ್ಥೆಗಳನ್ನು ಸೇವೆ/ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಿರುವ ಮೇಲ್ಕಂಡ ಸಂಸ್ಥೆಗಳಿಗೆ ಹಣ ಪಾವತಿಸಿರುವುದನ್ನು ಸಭೆಯು ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 42 | |
| --- | --- |
| ವಿಷಯ ಸಂಖ್ಯೆ: | ಸಿಂ.08(b)/(03/26) |

## –ಃ ಟಿಪ್ಪಣಿ ಃ–

ವಿಷಯಃ **M/s Logisys, Bangalore ಮತ್ತು M/s Uniclare Solutions Pvt. Ltd., Bangalore – ಈ ಎರಡು ಸಂಸ್ಥೆಯವರಿಂದ ಪರೀಕ್ಷಾ ತಂತ್ರಾಂಶಗಳ ಸೇವೆಯನ್ನು ಪಡೆಯಲು ಕರಾರು ದರ ಒಪ್ಪಂದ ಮಾಡಿಕೊಳ್ಳುವ ಬಗ್ಗೆ.**

ಉಲ್ಲೇಖ:
1. ದಿನಾಂಕ:29.10.2025 ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯ
2. M/s Logisys, Bangalore - ಇವರ ಪತ್ರ ದಿನಾಂಕ:07.02.2026
3. M/s Uniclare Solutions Pvt. Ltd., Bangalore ಇವರ ಪತ್ರ ದಿನಾಂಕ:09.02.2026

*********

ವಿಶ್ವವಿದ್ಯಾನಿಲಯದಲ್ಲಿ ಸಿ.ಬಿ.ಸಿ.ಎಸ್. ಪಠ್ಯಕ್ರಮದಲ್ಲಿ ನಡೆಸಲಾಗುವ ವಿವಿಧ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ. ಮತ್ತು ಬಿ.ಪಿ.ಇಡಿ. ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಪರೀಕ್ಷಾ ಕಾರ್ಯಗಳನ್ನು ಡಿಜಿಟಲೀಕರಣಗೊಳಿಸುವ ಸಲುವಾಗಿ, M/s Logisys, Bangalore ಮತ್ತು M/s Uniclare Solutions Pvt. Ltd., Bangalore – ಈ ಎರಡು ಸಂಸ್ಥೆಯವರಿಂದ ಪರೀಕ್ಷಾ ತಂತ್ರಾಂಶಗಳ ಸೇವೆಯನ್ನು ಪಡೆಯಲು 2018–19ನೇ ಸಾಲಿನಿಂದ 05 ವರ್ಷಗಳ ಅವಧಿಗೆ ಇ–ಟೆಂಡರ್ ಪ್ರಕ್ರಿಯೆಗಳ ಮೂಲಕ ಕರಾರು ದರ ಒಪ್ಪಂದ ಮಾಡಿಕೊಳ್ಳಲಾಗಿತ್ತು.

ಸಿ.ಬಿ.ಸಿ.ಎಸ್. ಪಠ್ಯಕ್ರಮದಲ್ಲಿ ವ್ಯಾಸಂಗ ಪೂರೈಸಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳಿಗೆ ಸರ್ಕಾರದ UUCMS ತಂತ್ರಾಂಶದಲ್ಲಿ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಲು ಅವಕಾಶ ಇಲ್ಲದಿರುವುದರಿಂದ, ಸಿಂಡಿಕೇಟ್ ಸಭೆಯ ನಿರ್ಣಯದನುಸಾರ, ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ. ಮತ್ತು ಬಿ.ಪಿ.ಇಡಿ. ಪದವಿಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಮತ್ತು ದ್ವಿಗುಣ ಅವಧಿ ಪೂರೈಸಿ ಬಾಕಿ ಉಳಿಸಿಕೊಂಡಂತಹ ವಿಷಯಗಳಿಗೆ ಪರೀಕ್ಷೆಗಳನ್ನು ನಡೆಸಲು ಮೇಲ್ಕಂಡ ಸಂಸ್ಥೆಯವರಿಂದ ಪರೀಕ್ಷಾ ತಂತ್ರಾಂಶಗಳ ಸೇವೆಯನ್ನು ಪಡೆಯಲು ನವಂಬರ್–2023ರಿಂದ ಮುಂದಿನ 01 ವರ್ಷದ ಅವಧಿಗೆ ಕರಾರು ದರ ಒಪ್ಪಂದವನ್ನು ಮುಂದುವರೆಸಲಾಗಿತ್ತು.

ಮುಂದುವರೆದು, ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ವಿವಿಧ ಸ್ನಾತಕ, ಸ್ನಾತಕೋತ್ತರ, ಬಿ.ಇಡಿ. ಮತ್ತು ಬಿ.ಪಿ.ಇಡಿ. ಪದವಿ ವಿದ್ಯಾರ್ಥಿಗಳಿಗೆ ನವಂಬರ್–2024 ರಿಂದ ಮುಂದಿನ 01 ವರ್ಷದ ಅವಧಿಗೆ ಪ್ರತಿ ವಿದ್ಯಾರ್ಥಿಗಳಿಗೆ M/s Logisys, Bangalore ಮತ್ತು M/s Uniclare Solutions Pvt. Ltd., Bangalore – ಈ ಎರಡು ಸಂಸ್ಥೆಯವರಿಂದ ಕ್ರಮವಾಗಿ ರೂ.500=00 ಮತ್ತು ರೂ.300=00 ರಂತೆ ದರಗಳನ್ನು ನಿಗಧಿಪಡಿಸಿ ಪರೀಕ್ಷಾ ತಂತ್ರಾಂಶಗಳ ಸೇವೆಯನ್ನು ಪಡೆಯಲು ಕರಾರು ದರ ಒಪ್ಪಂದವನ್ನು ಮುಂದುವರೆಸಲಾಗಿತ್ತು. ಸದರಿ ಕರಾರು ದರ ಒಪ್ಪಂದ ಅವಧಿಯು ಅಕ್ಟೋಬರ್–2025ರಂದು ಮುಕ್ತಾಯಗೊಂಡಿರುತ್ತದೆ.

ದಿನಾಂಕ:29.10.2025ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ, ನವಂಬರ್–2025 ರಿಂದ ಮುಂದಿನ 01 ವರ್ಷದ ಅವಧಿಗೆ M/s Logisys, Bangalore ಮತ್ತು M/s Uniclare Solutions Pvt. Ltd., Bangalore – ಈ ಎರಡು ಸಂಸ್ಥೆಯವರಿಂದ ಪರೀಕ್ಷಾ ತಂತ್ರಾಂಶ ಸೇವೆ ಪಡೆಯಲು ಅನುಮೋದನೆ ನೀಡಿದರನ್ವಯ, ಕರಾರು ದರ ಒಪ್ಪಂದ ಮಾಡಿಕೊಳ್ಳಲು ಸದರಿ ಸಂಸ್ಥೆಯವರಿಗೆ ಪತ್ರ ಬರೆಯಲಾಗಿತ್ತು.

ಮುಂದುವರೆದಿದೆ...

ಕುಲಸಚಿವರು ಕುಲಪತಿಗಳು

M/s Logisys, Bangalore ಮತ್ತು M/s Uniclare Solutions Pvt. Ltd., Bangalore - ಈ ಎರಡು ಸಂಸ್ಥೆಯವರು ಕನಿಷ್ಠ 600 ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಈ ಹಿಂದಿನ ದರಗಳಂತೆ ಕ್ರಮವಾಗಿ ರೂ.500=00 ಮತ್ತು ರೂ.300=00 ರಂತೆ ದರಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಗಳನ್ನು ನೀಡಲು ದರಸೂಚಿಗಳನ್ನು ಸಲ್ಲಿಸಿರುತ್ತಾರೆ.

ತತ್ಸಂಬಂಧವಾಗಿ, ನವಂಬರ್–2025 ರಿಂದ ಮುಂದಿನ 01 ವರ್ಷದ ಅವಧಿಗೆ ಕರಾರು ದರ ಒಪ್ಪಂದ ಮಾಡಿಕೊಳ್ಳುವ ಬಗ್ಗೆ M/s Logisys, Bangalore ಮತ್ತು M/s Uniclare Solutions Pvt. Ltd., Bangalore - ಈ ಎರಡು ಸಂಸ್ಥೆಗಳವರು ಸಲ್ಲಿಸಿರುವ ದರಸೂಚಿಗಳನ್ನು ದಿನಾಂಕ:12.03.2026ರಂದು ನಡೆಯುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

- **ಡಾ. ಜಿ.ಕೆ. ಪ್ರೇಮಾ, ಮಾನ್ಯ ಸಿಂಡಿಕೇಟ್ ಸದಸ್ಯರು** – ಇವರು ಪರೀಕ್ಷಾ ಮೌಲ್ಯಮಾಪನ ಬಿಲ್ಲುಗಳನ್ನು ಯುಗಾದಿಯೊಳಗೆ ಸಂಬಂಧಿಸಿದ ಅಧ್ಯಾಪಕರುಗಳಿಗೆ ತುರ್ತಾಗಿ ನೀಡುವಂತೆ ಕೋರಿದರು.

**:: ನಿರ್ಣಯ ::**

M/s Logisys, Bangalore ಮತ್ತು M/s Uniclare Solutions Pvt. Ltd., Bangalore - ಈ ಎರಡು ಸಂಸ್ಥೆಯವರು ಪ್ರತಿ ವಿದ್ಯಾರ್ಥಿಗಳ ಸಂಖ್ಯೆಗಳಿಗನುಗುಣವಾಗಿ ಕ್ರಮವಾಗಿ ರೂ.650=00 ಮತ್ತು ರೂ.450=00 ರಂತೆ ದರಗಳಿಗೆ ಪರೀಕ್ಷಾ ತಂತ್ರಾಂಶ ಸೇವೆಗಳನ್ನು ನವೆಂಬರ್–2025 ರಿಂದ ಮುಂದಿನ 01 ವರ್ಷದ ಅವಧಿಗೆ ಕರಾರು ದರ ಒಪ್ಪಂದ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ – 43 | |
| --- | --- |
| ವಿಷಯ ಸಂಖ್ಯೆ: | ಸಿಂ.08(c)/(03/26) |

## –: ಟಿಪ್ಪಣಿ :–

ವಿಷಯಃ **ದಿನಾಂಕ:07.03.2026 ರಂದು ಜರುಗಿದ ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿಯ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು.**

ಉಲ್ಲೇಖ:
1. ಸಂಖ್ಯೆ:ದಾವಿ:ಪವಿ:ಎಂಪಿಐಸಿ:(23):2025–26/ ದಿನಾಂಕ:03.03.2026
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11.03.2026

*********

ಉಲ್ಲೇಖಿತ (1)ರ ಪತ್ರದಲ್ಲಿ, ಡಿಸೆಂಬರ್–2025/ ಜನವರಿ/ ಫೆಬ್ರವರಿ–2026 ರ ಮಾಹೆಗಳಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಯ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಜರುಗಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದ ವಿದ್ಯಾರ್ಥಿಗಳನ್ನು ತನಿಖೆ/ವಿಚಾರಣೆ ನಡೆಸುವ ಸಂಬಂಧವಾಗಿ ದಿನಾಂಕ:07.03.2026ರಂದು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ" ಸಭೆಯನ್ನು ಏರ್ಪಡಿಸಲಾಗಿತ್ತು.

ಸದರಿ ಸಭೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಎಸಗಿರುವ ಅಕ್ರಮಗಳ ತೀವ್ರತೆಯ ಮೇರೆಗೆ ತನಿಖೆ /ವಿಚಾರಣೆ ನಡೆಸಿ, ಸಭೆಯಲ್ಲಿ ಕೂಲಂಕುಷವಾಗಿ ಚರ್ಚೆ ನಡೆಸಿದ ಬಳಿಕ ಸಮಿತಿಯು ಕೈಗೊಂಡ ನಿರ್ಣಯಗಳ ಸಭಾ ನಡಾವಳಿಗಳನ್ನು ದಿನಾಂಕ:12.03.2026ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

### :: ನಿರ್ಣಯ ::

ದಿನಾಂಕಃ 07.03.2026ರಂದು ಜರುಗಿದ "ಪರೀಕ್ಷಾ ಅಕ್ರಮಗಳ ವಿಚಾರಣೆ ಮತ್ತು ಶಿಸ್ತು ಪಾಲನಾ ಸಮಿತಿ" ಸಭೆಯ ನಡಾವಳಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ, ಚರ್ಚಿಸಿದ ಬಳಿಕ ಸಭೆಯು ಒಮ್ಮತದಿಂದ ಅನುಮೋದಿಸಿತು ಹಾಗೂ ಸದರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ – ಇಲ್ಲಿ ನಡೆದಿರುವ ಪರೀಕ್ಷಾ ಅಕ್ರಮದ ಬಗ್ಗೆ ವಿಶ್ವವಿದ್ಯಾನಿಲಯದ Ordinance Governing the acts of indiscipline and malpractice in Davangere University Examinations ರಂತೆ ಕ್ರಮವಹಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರು ಕುಲಪತಿಗಳು

| ದೃಶ್ಯಕಲಾ ಮಹಾವಿದ್ಯಾಲಯ – 44 | |
|---|---|
| ವಿಷಯ ಸಂಖ್ಯೆ: | ಸಿಂ.09(a)/(03/26) |

## –ಃ ಟಿಪ್ಪಣಿ ಃ–

**ವಿಷಯಃ ದಿನಾಂಕ:25.02.2026 ರಂದು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆದ ಸಲಹಾ ಸಮಿತಿಯ ನಡಾವಳಿಗಳಿಗೆ ಅನುಮೋದನೆ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ದಿನಾಂಕ:25.02.2026 ರ ಸಂಜೆ 4:30 ಗಂಟೆಗೆ ದೃಶ್ಯಕಲಾ ಮಹಾವಿದ್ಯಾಲಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಲಹಾ ಸಮಿತಿ ಸಭೆಯನ್ನು ಏರ್ಪಡಿಸಿಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ನಡಾವಳಿಗಳನ್ನು ದಿನಾಂಕಃ12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ದಿನಾಂಕಃ 25.02.2026ರಂದು ಜರುಗಿದ ದೃಶ್ಯಕಲಾ ಮಹಾವಿದ್ಯಾಲಯದ ಸಲಹಾ ಸಮಿತಿ ಸಭೆಯ ನಡಾವಳಿಗಳ ಕುರಿತು ಕೂಲಂಕುಷವಾಗಿ ಚರ್ಚಿಸಿ, ಚರ್ಚಿಸಿದ ಬಳಿಕ ಸದರಿ ಸಭೆಯ ನಡಾವಳಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಐ.ಕ್ಯೂ.ಎ.ಸಿ. ವಿಭಾಗ – 45 | |
|---|---|
| ವಿಷಯ ಸಂಖ್ಯೆ: | ಸಿಂ.10(a)/(03/26) |

## –: ಟಿಪ್ಪಣಿ :–

ವಿಷಯಃ **ಸಹಾಯಕ ಪ್ರಾಧ್ಯಾಪಕ ಹುದ್ದೆಯ ವೃತ್ತಿ ಪದೋನ್ನತಿ (CAS) ಯನ್ನು ಪರಿಗಣಿಸುವ ಬಗ್ಗೆ.**

ಉಲ್ಲೇಖ:
1. ಪತ್ರಸಂಖ್ಯೆ: ದಾವಿವಿ/ಮಾಸನಿ/ 1029/ 2025–26/ 4103 ದಿನಾಂಕ:29.12.2025
2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:24.02.2026

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಸಹಾಯಕ ಪ್ರಾಧ್ಯಾಪಕರ ಅರ್ಜಿಗಳನ್ನು ಯುಜಿಸಿ–ಸಿಎಎಸ್ 2018ರ ನಿಯಮಾವಳಿಯಂತೆ ವಿಭಾಗದ ಅಧ್ಯಕ್ಷರು, ಡೀನರು ಮತ್ತು ಬಾಹ್ಯ ವಿಷಯ ತಜ್ಞರಿಂದ ಮೌಲ್ಯಮಾಪನ ಮಾಡಿ Screen and Evaluation Committee ಯಲ್ಲಿ ಇವರ Academic Level 10 to Academic Level 11ಕ್ಕೆ ವೃತ್ತಿ ಪದೋನ್ನತಿಗೆ ಅರ್ಹರಿರುತ್ತಾರೆಂದು ಈ ಕೆಳಕಂಡಂತೆ ಅನುಮೋದನೆಯನ್ನು ನೀಡಿರುತ್ತಾರೆ.

| ಕ್ರ.ಸಂ. | ಸಹಾಯಕ ಪ್ರಾಧ್ಯಾಪಕರ ಹೆಸರು | ವಿಭಾಗ | ಕೆಲಸಕ್ಕೆ ಸೇರಿದ ದಿನಾಂಕ | ವೃತ್ತಿ ಪದೋನ್ನತಿಯನ್ನು ಪಡೆದ ದಿನಾಂಕ |
|---|---|---|---|---|
| 1. | ಶ್ರೀ ಅರುಣ್ ಕುಮಾರ ಆರ್. | ವಾಣಿಜ್ಯ ಅಧ್ಯಯನ ವಿಭಾಗ | 24/06/2019 | 24/06/2025 |
| 2. | ಶ್ರೀಮತಿ ನಿವೇದಿತಾ ಬಿ.ಟಿ | ಸಸ್ಯಶಾಸ್ತ್ರ ಅಧ್ಯಯನ ವಿಭಾಗ | 24/06/2019 | 24/06/2025 |
| 3. | ಶ್ರೀಮತಿ ರೇಷ್ಮ ಎಂ.ಡಿ. | ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ | 24/06/2019 | 24/06/2025 |
| 4. | ಡಾ. ರಂಗನಾಥ ಎಸ್ | ಗಣಿತಶಾಸ್ತ್ರ ಅಧ್ಯಯನ ವಿಭಾಗ | 24/05/2019 | 24/05/2025 |
| 5. | ಡಾ. ಸ್ವಪ್ನ ಪವನ್ ಜಿ | ಗಣಕಯಂತ್ರ ಅಧ್ಯಯನ ವಿಭಾಗ | 15/07/2019 | 20/05/2025 |

ಮೇಲ್ಕಂಡ ವಿಷಯವನ್ನು ದಿನಾಂಕಃ12.03.2026 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆ ಹಾಗೂ ಅನುಮೋದನೆಗಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದ ಈ ಮೇಲ್ಕಂಡ ಸಹಾಯಕ ಪ್ರಾಧ್ಯಾಪಕರ ಅರ್ಜಿಗಳನ್ನು ಯುಜಿಸಿ–ಸಿಎಎಸ್ 2018ರ ನಿಯಮಾವಳಿಯಂತೆ ವಿಭಾಗದ ಅಧ್ಯಕ್ಷರು, ಡೀನರು ಮತ್ತು ಬಾಹ್ಯ ವಿಷಯ ತಜ್ಞರಿಂದ ಮೌಲ್ಯಮಾಪನ ಮಾಡಿ Screen and Evaluation Committee ಯಲ್ಲಿ ಇವರ **Academic Level 10 to Academic Level 11**ಕ್ಕೆ ವೃತ್ತಿ ಪದೋನ್ನತಿ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು

ಕುಲಸಚಿವರು ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 46 | |
|---|---|
| ವಿಷಯ ಸಂಖ್ಯೆ: | ಸಿಂ.01(i)/(03/26) |

# –ಃ ಟಿಪ್ಪಣಿ ಃ–

ವಿಷಯಃ ಶ್ರೀಮತಿ ಶಾರದಾ ಪಾಟೀಲ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು

*********

ಶ್ರೀಮತಿ ಶಾರದಾ ಪಾಟೀಲ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | **ಸರ್ಕಾರದ ಆದೇಶ ಉಲ್ಲಂಘನೆ ಮಾಡಿ 175 ಹುದ್ದೆಗಳ ಬದಲಾಗಿ 309 ಹೊರಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಂಡಿರುವ ಕುರಿತು.** |
| ನಿರ್ಣಯ | ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಹಂತ ಹಂತವಾಗಿ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳನ್ನು ಹಾಗೂ ಸ್ನಾತಕೋತ್ತರ ಕೇಂದ್ರವನ್ನು ಆರಂಭಿಸಿರುವುದರಿಂದ ವಿಭಾಗಗಳ ನಿರ್ವಹಣೆಗಾಗಿ ಹೊರಗುತ್ತಿಗೆ ನೌಕರರುಗಳನ್ನು ವಿಶ್ವವಿದ್ಯಾನಿಲಯದ ಆಧ್ಯತೆಯ ಮೇರೆಗೆ ನೇಮಕ ಮಾಡಿಕೊಳ್ಳಲಾಗಿದೆ ಹಾಗೂ ಸರ್ಕಾರದ ಆದೇಶಾನುಸಾರ ವಿಶ್ವವಿದ್ಯಾನಿಲಯವು ಹರಿಯಬ್ಬೆ ಹಾಗೂ ತುರುವನೂರು ಘಟಕ ಕಾಲೇಜುಗಳನ್ನು ನಿರ್ವಹಣೆ ಮಾಡುತ್ತಿರುವುದರಿಂದ ಸದರಿ ಕಾಲೇಜುಗಳ ಅಗತ್ಯ ಸೇವೆಗಳನ್ನು ನಿರ್ವಹಿಸಲು ಹೊರಗುತ್ತಿಗೆ ನೌಕರರುಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. |
| **ವಿಷಯ–2** | **ದೀರ್ಘಾವಧಿ ಸೇವೆ ಸಲ್ಲಿಸಿದ ಹೊರಗುತ್ತಿಗೆ ಬೋಧಕೇತರ ನೌಕರರನ್ನು ಸೇವಾ ಹಿರಿತನಕ್ಕನುಗುಣವಾಗಿ ಸಂಚಿತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಕುರಿತು.** |
| ನಿರ್ಣಯ | ಕಾನೂನಿನಲ್ಲಿ ಅವಕಾಶವಿರುವುದಿಲ್ಲ. |
| **ವಿಷಯ–3** | **ಹರಿಯಬ್ಬೆ ಘಟಕ ಕಾಲೇಜಿಗೆ ಪೂರ್ಣಾವಧಿ ಬೋಧಕೇತರ ಸಿಬ್ಬಂದಿಯನ್ನು ಒದಗಿಸುವ ಕುರಿತು.** |
| ನಿರ್ಣಯ | ಮುಂದಿನ ಶೈಕ್ಷಣಿಕ ವರ್ಷದಲ್ಲಿ ಪರಿಗಣಿಸಲಾಗುವುದು. |
| **ವಿಷಯ–4** | **ವಿಶ್ವವಿದ್ಯಾನಿಲಯದ ಹಾಲಿ ಕಾರ್ಯನಿರ್ವಹಿಸುತ್ತಿರುವ ದೈಹಿಕ ಶಿಕ್ಷಣ ನಿರ್ದೇಶಕರನ್ನು ಬದಲಾಯಿಸುವ ಕುರಿತು.** |
| ನಿರ್ಣಯ | ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ಕ್ರಮವಹಿಸಲಾಗುವುದು. |
| **ವಿಷಯ–4** | **ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅವಧಿ ಮೀರಿದ ಸಿಂಡಿಕೇಟ್ ಸದಸ್ಯರನ್ನು ಬದಲಾಯಿಸಿ ಸಮಿತಿಗಳನ್ನು ಪುನರ್ ರಚಿಸುವ ಕುರಿತು.** |
| ನಿರ್ಣಯ | ಬದಲಾಯಿಸಲು ಕ್ರಮಕೈಗೊಳ್ಳಲಾಗುವುದು. |

ಕುಲಸಚಿವರು　　　　　　　　　　ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 47 | |
|---|---|
| ವಿಷಯ ಸಂಖ್ಯೆ: | ಸಿಂ.01(j)/(03/26) |

# –: ಟಿಪ್ಪಣಿ :–

ವಿಷಯಃ ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು

*********

ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| **ವಿಷಯ–1** | ಕ್ರೀಡಾ ಸಂಕೀರ್ಣದ ಡಿ.ಪಿ.ಆರ್ ತಯಾರಿಸಿದ ಬಗ್ಗೆ ಚರ್ಚಿಸಿ ಅನುಮೋದನೆ ನೀಡುವ ಕುರಿತು. |
| ನಿರ್ಣಯ: | ಚರ್ಚಿಸಿದ ಬಳಿಕ ಅನುಮೋದನೆ ನೀಡಿ ನಿರ್ಣಯಿಸಲಾಯಿತು. |
| ವಿಷಯ–2 | ದಕ್ಷಿಣ ವಲಯ ಅಂತರ ವಿಶ್ವವಿದ್ಯಾನಿಲಯಗಳ ಪುರುಷರ ಮತ್ತು ಮಹಿಳೆಯರ ಖೋ–ಖೋ ಪಂದ್ಯಾವಳಿಯ ಸಂಘಟನೆ ಬಗ್ಗೆ. |
| **ವಿಷಯ–3** | ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಎಂ.ಪಿ.ಇಡಿ ವಿಭಾಗಕ್ಕೆ ಎನ್.ಸಿ.ಆರ್.ಟಿ ವತಿಯಿಂದ ಮಾನ್ಯತೆ ಪಡೆಯಲು ಕ್ರಮ ಕೈಗೊಳ್ಳುವ ಬಗ್ಗೆ ಚರ್ಚೆಯಾಗಿದೆ. ಆದರೆ, ಕಾರ್ಯರೂಪಕ್ಕೆ ಬಂದಿಲ್ಲ ಇದರ ಬಗ್ಗೆ ಕ್ರಮ ಕೈಗೊಳ್ಳಲು ದಿನಾಂಕ ನಿಗದಿಪಡಿಸುವುದು. |
| ವಿಷಯ–4 | **2024–25** ಮತ್ತು **2025–26** ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಅಂದಾಜು ಪಟ್ಟಿಯಲ್ಲಿರುವಂತೆ **(GYMKHANA ACTIVITIES)** ಜಿಮ್ಖಾನ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಒಟ್ಟು ಸಂಗ್ರವಾದ ಮೊತ್ತ ಮತ್ತು ಅದರ ಖರ್ಚು ವೆಚ್ಚದ ವಿವರಗಳ ಸಂಪೂರ್ಣ ದಾಖಲೆಯೊಂದಿಗೆ ಮಾಹಿತಿ ಒದಗಿಸುವುದು. |

ಈ ಮೇಲ್ಕಂಡ 03 ಅಂಶಗಳನ್ನು ಮುಂದೂಡಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 48 | |
|---|---|
| ವಿಷಯ ಸಂಖ್ಯೆ: | ಸಿಂ.01(k)/(03/26) |

## –: ಟಿಪ್ಪಣಿ :–

ವಿಷಯಃ ಡಾ. ಜಿ.ಕೆ. ಪ್ರೇಮ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು

*********

ಡಾ. ಜಿ.ಕೆ. ಪ್ರೇಮ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| .ವಿಷಯ–1 | ಎಂ.ಪಿ.ಇಡಿ ವಿಭಾಗದಲ್ಲಿ ಅತಿಥಿ ಉಪನ್ಯಾಸಕರನ್ನು ಯಾವ ಆಯ್ಕೆ ಪ್ರಕ್ರಿಯೆ/ ಆಧಾರದಲ್ಲಿ ನೇಮಕ ಮಾಡಲಾಗಿದೆ ಮತ್ತು ಅವರಿಗೆ ಎಷ್ಟು ಗೌರವ ಧನ/ ವೇತನ/ ಸಂಭಾವನೆ ಅನ್ನು ಯಾವ ಆಧಾರ/ ನಿಯಮದಡಿಯಲ್ಲಿ ಕೊಡಲಾಗುತ್ತಿದೆ. ಅವರ ಬಯೋಡಾಟ ಏನು ದಾಖಲೆಯೊಂದಿಗೆ ಮಾಹಿತಿ ಒದಗಿಸುವುದು. |
| ನಿರ್ಣಯ | ವಿಶ್ವವಿದ್ಯಾನಿಲಯದ ನಿಯಮಗಳ ಪ್ರಕಾರ ನೇಮಕ ಮಾಡಿಕೊಳ್ಳಲಾಗುತ್ತಿದೆ. |
| ವಿಷಯ–2 | ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಬಿ.ಪಿ.ಇಡಿ ಕೋರ್ಸ್ ಆರಂಭಿಸುವ ಕುರಿತು. |
| ನಿರ್ಣಯ | ಎನ್.ಸಿ.ಟಿ.ಇ. ಅನುಮೋದನೆ ಪಡೆದ ನಂತರ ಕ್ರಮಕೈಗೊಳ್ಳಲಾಗುವುದು. |
| ವಿಷಯ–3 | ಪ್ರಸಾರಾಂಗ ಸರ್ವಜ್ಞನ ಪೀಠ, ಬಾಬು ಜಗಜೀವನ ರಾಮ್ ಅಧ್ಯಯನ ಪೀಠ ಗ್ರಂಥಾಲಯ ಇತರೆ ಉಪಸಮಿತಿಗಳು ಇವುಗಳಿಗೆ ನೇಮಿಸಿರುವ ನಿರ್ದೇಶಕರು, ಸಂಚಾಲಕರು ಮತ್ತು ಹಾಸ್ಟೆಲ್ ವಾರ್ಡನ್ಸ್ ಇವರನ್ನು ನೇಮಿಸುವ ವಿಧಾನ ಮತ್ತು ವಿಶ್ವವಿದ್ಯಾನಿಲಯವು ಏನಾದರೂ ನಿಯಮಗಳನ್ನು ಮಾಡಿದ್ದಲ್ಲಿ ದಾಖಲೆ ಸಹಿತ ಮಾಹಿತಿ ಒದಗಿಸುವುದು. |
| ನಿರ್ಣಯ | ವಿಶ್ವವಿದ್ಯಾನಿಲಯಗಳ ನಿಯಮಗಳ ಪ್ರಕಾರ ಕ್ರಮಕೈಗೊಳ್ಳಲಾಗುತ್ತಿದೆ. |
| ವಿಷಯ–4 | ಅಧ್ಯಯನ ಪೀಠ ಮತ್ತು ಪ್ರಸಾರಾಂಗ ಮತ್ತು ಗ್ರಂಥಾಲಯ ಇವುಗಳಿಗೆ ಇಟ್ಟಿರುವ ಇಡಿಗಂಟೆಷ್ಟು ಇದುವರೆಗೆ ಖರ್ಚಾದ ಹಣವೆಷ್ಟು ಅದ್ರಿಂದಾದ ಲಾಭವೆಷ್ಟು ಇದುವರೆಗೆ ನಡೆದಿರುವ ಕಾರ್ಯಕ್ರಮಗಳು ಏನು ಎಂಬುದನ್ನು ದಾಖಲೆ ಸಹಿತ ಮಾಹಿತಿ ಒದಗಿಸುವುದು. |
| ನಿರ್ಣಯ | – |
| ವಿಷಯ–5 | ಸದರಿ ಶೈಕ್ಷಣಿಕ ವರ್ಷದಲ್ಲಿ ಪಿ.ಹೆಚ್.ಡಿ ಅಧ್ಯಯನಕ್ಕಾಗಿ ಅರ್ಜಿ ಕರೆಯಲಾಗಿದ್ದು, ವಿಭಾಗವಾರು ಇರುವ ಒಟ್ಟು ಸೀಟುಗಳೆಷ್ಟು; ರೋಸ್ಟರ್ ಮತ್ತು ಜೆಂಡರ್ ಪ್ರಕಾರ ಎಷ್ಟು ಸೀಟುಗಳಿಗೆ ದಾಖಲೆ ಸಹಿತ ಮಾಹಿತಿ ಒದಗಿಸಿ. |
| ನಿರ್ಣಯ | ಪಿಹೆಚ್.ಡಿ. ವಿಭಾಗದಿಂದ ಮಾಹಿತಿ ಪೂರೈಸಲು ನಿರ್ಣಯಿಸಲಾಯಿತು. |
| ವಿಷಯ–6 | ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕ ಮತ್ತು ಅಧ್ಯಾಪಕೇತರ ವರ್ಗದವರಿಗೆ ಕೊಡ ಮಾಡುವ ಪದೋನ್ನತಿಗೆ ಅನುಸರಿಸುವ ಮಾನದಂಡಗಳು ಏನು ಯು.ಜಿ.ಸಿ. ಯ ಯಾವ ನಿಯಮಾವಳಿಯನ್ನು ಅನುಸರಿಸಲಾಗುವುದು ಮತ್ತು ಕೆ.ಸಿ.ಎಸ್.ಆರ್. ನಿಯಮಗಳೇನು ಹಾಗೂ ಸಿ ಅಂಡ್ ಆರ್ ನೀವು ಅನುಸರಿಸುವ ನಿಯಮಗಳೇನು ವಿವರಗಳೊಂದಿಗೆ ಮಾಹಿತಿ ಒದಗಿಸಿ. |
| ನಿರ್ಣಯ | ಬೋಧಕರಿಗೆ ಯು.ಜಿ.ಸಿ. ನಿಯಮಾವಳಿ ಪ್ರಕಾರ ಮತ್ತು ಬೋಧಕೇತರರಿಗೆ ಕೆ.ಸಿ.ಎಸ್.ಆರ್. ಹಾಗೂ ಸಿ. ಅಂಡ್ ಆರ್ ನಿಯಮಾವಳಿ ಪ್ರಕಾರ ಕ್ರಮಕೈಗೊಳ್ಳಲಾಗುತ್ತಿದೆ. |
| ವಿಷಯ–7 | ತಮಗೆ ತಿಳಿಸಿರುವಂತೆ ಈಗಾಗಲೇ ರಾಜ್ಯಾದ್ಯಾಂತ ಉನ್ನತ ಪದವಿಗಳ ನೈಜತೆಯ ಬಗ್ಗೆ ಅನುಮಾನಗಳಿದ್ದು, ತಮ್ಮ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ನೇಮಕಗೊಂಡಿರುವವರ ವಿದ್ಯಾರ್ಹತೆ ಪ್ರಮಾಣ ಪತ್ರಗಳ ನೈಜತೆ ಪರಿಶೀಲನೆ ನಡೆದಿದೆಯೇ; ನೇಮಕಗೊಂಡಾಗ ನಡೆದಿದ್ದರೂ ಸಹ ಮತ್ತೊಮ್ಮೆ ಶೀಘ್ರವೇ ಒಂದು ಸಮಿತಿಯನ್ನು ರಚಿಸಿ ಎಲ್ಲರ ಪದವಿ ಪ್ರಮಾಣ ಪತ್ರಗಳ ನೈಜತೆ ಪರಿಶೀಲಿಸುವ ಕುರಿತು. |
| ನಿರ್ಣಯ | ವಿದ್ಯಾರ್ಹಗೆ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯಗಳಿಗೆ ನೈಜತೆ ಪರಿಶೀಲನೆಗೆ ಕಳುಹಿಸಲು ಕ್ರಮಕೈಗೊಳ್ಳಲಾಗುವುದು. |

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 49 | |
|---|---|
| ವಿಷಯ ಸಂಖ್ಯೆ: | ಸಿಂ.01(l)/(03/26) |

# –: ಟಿಪ್ಪಣಿ :–

ವಿಷಯಃ ಡಾ. ಪ್ರಶಾಂತ ಎನ್.ಸಿ. ಮಾನ್ಯ ಸಿಂಡಿಕೇಟ್ ಸದಸ್ಯರು – ಇವರ ಪ್ರಸ್ತಾವನೆ ಕುರಿತು

*********

ಡಾ. ಪ್ರಶಾಂತ ಎನ್.ಸಿ., ಮಾನ್ಯ ಸಿಂಡಿಕೇಟ್ ಸದಸ್ಯರು – ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ದಿನಾಂಕ:12.03.2026 ರಂದು ಏರ್ಪಡಿಸಲಾಗಿರುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

| | |
|---|---|
| .ವಿಷಯ–1 | ಜಾಗತಿಕ ಮಟ್ಟದಲ್ಲಿ ಆವಿಷ್ಕಾರಕ್ಕೆ ಹೆಚ್ಚು ಪ್ರಾದಾನ್ಯತೆ ಸಿಗುತ್ತಿದ್ದು ಹೊಸ ಉದ್ಯಮಗಳಿಗೆ ಅವಕಾಶ ನೀಡಲು ದಾವಣಗೆರೆ ವಿಶ್ವವಿದ್ಯಾನಿಲಯದ ಆವರಣದಲ್ಲಿ **START UP INCUBATION** ತೆರೆಯುವ ಅವಶ್ಯಕತೆ ಇದ್ದು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ತಂತ್ರಜ್ಞಾನ ಮತ್ತು ಇತರೆ ವಿಭಾಗಗಳಿಗೆ ಅನುಕೂಲವಾಗಲು ಸ್ಥಳ ನಿಗದಿಪಡಿಸಬೇಕಾಗಿರುತ್ತದೆ. ಆದುದರಿಂದ, ತಾವುಗಳು ಸ್ಥಳ ನಿಗದಿಪಡಿಸಿ ಅದಕ್ಕೆ ಅವಶ್ಯಕತೆ ಇರುವ ಪ್ರೋತ್ಸಾಹಧನ ಮತ್ತು ಪೀಠೋಪಕರಣ ವ್ಯವಸ್ಥೆಯನ್ನು ಮಾಡಿಕೊಡವು ಕುರಿತು. |
| ನಿರ್ಣಯ | **START UP INCUBATION** ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಕಳುಹಿಸಲಾಗಿದ್ದು ತಿದ್ದುಪಡಿಗಾಗಿ ಬಂದಿರುವುದರಿಂದ ಪುನಃ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಕಳುಹಿಸಲು ಕ್ರಮಕೈಗೊಳ್ಳಲಾಗುತ್ತಿದೆ. |
| ವಿಷಯ–2 | ಕೌಶಲ್ಯ ಆಧಾರಿತ ತರಭೇತಿಯನ್ನು ನಮ್ಮ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಪದವಿಗಳಿಗೆ ಒಂದು ವರ್ಷದ ಕೋರ್ಸ್‌ಗಳನ್ನು ತೆರೆಯುವುದು.<br>ಉದಾ:<br>1. ಯೋಗ ಸರ್ಟಿಫಿಕೇಟ್ ಕೋರ್ಸ್<br>2. ಟ್ಯೂರಿಸಮ್ ವಿಷಯ ಆಧಾರಿತ ಸರ್ಟಿಫಿಕೇಟ್ ಕೋರ್ಸ್ |
| ನಿರ್ಣಯ | ಮುಂದಿನ ಶೈಕ್ಷಣಿಕ ವರ್ಷದಿಂದ ಕ್ರಮಕೈಗೊಳ್ಳಲಾಗುವುದು. |

ಕೊನೆಯಲ್ಲಿ ಕುಲಸಚಿವರು(ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಕುಲಪತಿಗಳು